04 October 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಜಗತ್ತಿನಲ್ಲಿ ಎಲ್ಲಿ ಹುಡುಕಿದರೂ ಅಪ್ಪನಂತಹ ಭರವಸೆಯುಳ್ಳ ವ್ಯಕ್ತಿ ಮತ್ತೊಬ್ಬರು ಸಿಗುವುದಿಲ್ಲ! ಹೀಗಾಗಿ ಅಪ್ಪನೇ ಆಸ್ತಿ!

-ಸ್ನೇಹಾ ಆನಂದ್

ಅರ್ಜಿ ಡಿಲಿಟ್: ಜೆಡಿಎಸ್, ಬಿಜೆಪಿ ನಾಯಕರ ಬಂಧನಕ್ಕೆ ಆಗ್ರಹ ಪುಟ ಸಂ. 2

ಪುಟ ಸಂ. 3 ಅಹಿಂಸೆಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ: ಗಾಂಧಿ ಜಯಂತಿ

ಬರ: ವ್ಯಾಪ್ತಿ ಮೀರಿದ ಸಮಸ್ಯೆ ಗಮನಕ್ಕೆ ತನ್ನಿ: ಶಾಸಕ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 287 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಮೈಸೂರಿನ ಪ್ರಣವಿ ಅರಸ್‌ಗೆ ಏಷ್ಯನ್ ಗೇಮ್ಸ್ ಗಾಲ್ಫ್ ಸ್ಪರ್ಧೆಯಲ್ಲಿ 'ಚಿನ್ನದ ಕಿರೀಟ'

ಮೈಸೂರು: ಏಷ್ಯನ್ ಗೇಮ್ಸ್ ಗಾಲ್ಫ್ ಸ್ಪರ್ಧೆಯಲ್ಲಿ ಮೈಸೂರಿನ ಪ್ರಣವಿ ಅರಸ್ ಚಿನ್ನ ಗೆದ್ದಿದ್ದಾರೆ. ಈ ಮೂಲಕ ಏಷ್ಯನ್ ಗೇಮ್ಸ್‌ನಲ್ಲಿ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯ ಮಹಿಳಾ ಗಾಲ್ಫರ್ ಎಂಬ ಹೆಗ್ಗಳಿಕೆಗೆ ಪ್ರಣವಿ ಪಾತ್ರರಾಗಿದ್ದಾರೆ.

ಯಾವುದನ್ನಾದರೂ ಮೊದಲ ಬಾರಿಗೆ ಮಾಡುವುದು ನನಗೆ ಇಷ್ಟ ಮುಂದೆ ಇನ್ನೂ ಹಲವರು ಈ ಸಾಧನೆ ಮಾಡಬಹುದು. ಆದರೆ ಮೊದಲಿಗರು ಯಾವಾಗಲೂ ಮೊದಲಿಗರೇ ಎಂದು ಪ್ರಣವಿ ಗೆಲುವಿನ ಬಳಿಕ ಹೇಳಿದರು.

ಪ್ರಣವಿ ಸಾಧನೆಯಿಂದ ಭಾರತ ಮಹಿಳಾ ತಂಡಕ್ಕೆ ಬೆಳ್ಳಿ ಪದಕವೂ ಲಭಿಸಿದೆ. ಆರಂಭದಲ್ಲಿ ಹಿನ್ನಡೆ ಅನುಭವಿಸಿದ್ದ ಪ್ರಣವಿ ಬಳಿಕ ಅದ್ಭುತವಾಗಿ ಚೇತರಿಸಿಕೊಂಡರು. ಅಂತಿಮ ಸುತ್ತಿನಲ್ಲಿ ಮೂರು ಬರ್ಡಿಗಳನ್ನು ದಾಖಲಿಸಿದರು.

ಅಂತಿಮ ಸುತ್ತನ್ನು 70 ಸ್ಟ್ರೋಕ್‌ಗಳಲ್ಲಿ ಈವನ್ ಪಾರ್‌ನಲ್ಲಿ ಮುಗಿಸಿದ ಪ್ರಣವಿ, ನಾಲ್ಕು ಸುತ್ತುಗಳಲ್ಲಿ ಒಟ್ಟು 15–ಅಂಡರ್ 265 ಸ್ಕೋರ್ ಮಾಡಿದರು. ಚೀನಾದ ಯಿನ್ ರುವೊನಿಂಗ್ 67 ಸ್ಟ್ರೋಕ್‌ಗಳೊಂದಿಗೆ

ಒಟ್ಟು 266 ಸ್ಕೋರ್ ಮಾಡಿ ಬೆಳ್ಳಿ ಪಡೆದರು. ಸಿಂಗಪುರದ ಶ್ಯಾನನ್ ಟಾನ್ ಕೂಡ 266 ಸ್ಕೋರ್ ಮಾಡಿದ್ದು ಕಂಚಿನ ಪದಕ ಗೆದ್ದರು.

ಅಂತಿಮ ಸುತ್ತಿನಲ್ಲಿ 6, 10 ಮತ್ತು 13ನೇ ಹೋಲ್‌ಗಳಲ್ಲಿ ಬರ್ಡಿ ದಾಖಲಿಸಿದ ಪ್ರಣವಿ, ತಂಡದ ಬೆಳ್ಳಿ ಪದಕದಲ್ಲೂ ಪ್ರಮುಖ ಪಾತ್ರ ವಹಿಸಿದರು. ತಂಡದ ಇತರ ಸದಸ್ಯರಾದ ಅದಿತಿ ಅಶೋಕ್ ಅಂತಿಮ ಸುತ್ತಿನಲ್ಲಿ 67 ಹಾಗೂ ದೀಕ್ಷಾ ದಾಗರ್ 77 ಸ್ಟ್ರೋಕ್‌ಗಳನ್ನು ದಾಖಲಿಸಿದರು.

ಹಿಂದಿನ ಏಷ್ಯನ್ ಗೇಮ್ಸ್‌ನಲ್ಲಿ ವೈಯಕ್ತಿಕ ಬೆಳ್ಳಿ ಗೆದ್ದಿದ್ದ ಅದಿತಿ, ಈ ಬಾರಿ ಐದು ಸತತ ಬರ್ಡಿಗಳನ್ನು ದಾಖಲಿಸಿದರು. ಒಂದು ಡಬಲ್ ಬೋಗಿ ಮತ್ತು ಒಂದು ಬೋಗಿಯೊಂದಿಗೆ ಅಂತಿಮ ಸುತ್ತನ್ನು ಮುಗಿಸಿದ ಅವರು ವೈಯಕ್ತಿಕ ವಿಭಾಗದಲ್ಲಿ 282ರ ಒಟ್ಟು ಸ್ಕೋರ್‌ನೊಂದಿಗೆ 14ನೇ ಸ್ಥಾನ ಹಂಚಿಕೊಂಡರು. ದೀಕ್ಷಾ 12 ಓವರ್‌ನೊಂದಿಗೆ 23ನೇ ಸ್ಥಾನ ಹಂಚಿಕೊಂಡರು.

ತಂಡದ ಪದಕ ನಿರ್ಧರಿಸಲು ಮೂವರು ಆಟಗಾರರ ಪೈಕಿ ಇಬ್ಬರ ಉತ್ತಮ ಸ್ಕೋರ್‌ಗಳನ್ನು ಪರಿಗಣಿಸಲಾಗುತ್ತದೆ. ಭಾರತ 14–ಅಂಡರ್ 546 ಸ್ಕೋರ್‌ನೊಂದಿಗೆ ಬೆಳ್ಳಿ ಪಡೆದರೆ, ಚೀನಾ 22–ಅಂಡರ್ 538 ಸ್ಕೋರ್‌ನೊಂದಿಗೆ ಚಿನ್ನ ಗೆದ್ದಿತು.

2002ರಲ್ಲಿ ಶಿವ್ ಕಪೂರ್ ಪುರುಷರ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಬಳಿಕ, ಏಷ್ಯನ್ ಗೇಮ್ಸ್ ಗಾಲ್ಫ್‌ನಲ್ಲಿ ಭಾರತಕ್ಕೆ ಒಲಿದ ಮೊದಲ ಚಿನ್ನದ ಪದಕವೂ ಇದಾಗಿದೆ. 1982ರ ದೆಹಲಿ ಏಷ್ಯನ್ ಗೇಮ್ಸ್ ಬಳಿಕವೂ ಇದು ಭಾರತದ ಅತ್ಯುತ್ತಮ ಗಾಲ್ಫ್ ಪ್ರದರ್ಶನವಾಗಿದೆ. 1982ರಲ್ಲಿ ಗಾಲ್ಫ್ ಏಷ್ಯನ್ ಗೇಮ್ಸ್ ಭಾಗವಾದ ಮೊದಲ ಆವೃತ್ತಿಯಲ್ಲಿ ಲಕ್ಷ್ಮಣ್ ಸಿಂಗ್ ಪುರುಷರ ವೈಯಕ್ತಿಕ ಚಿನ್ನ ಗೆದ್ದಿದ್ದರು. ಅಮಿತ್ ಲುತ್ರಾ ಮತ್ತು ರಾಜೀವ್ ಮೊಹ್ತಾ ಅವರೊಂದಿಗೆ ಸೇರಿ ತಂಡದ ಚಿನ್ನವನ್ನೂ ಅವರು ಗೆದ್ದಿದ್ದರು.

ಚಿನ್ನ ಗೆದ್ದ ಪೂವಮ್ಮಗೆ ಸಿಎಂ ಡಿಕೆಶಿ ಅಭಿನಂದನೆ

ಬೆಂಗಳೂರು: ಏಷ್ಯನ್ ಗೇಮ್ಸ್ ಮಹಿಳೆಯರ 4*400 ಮೀಟರ್ ರಿಲೇ ಓಟದಲ್ಲಿ ಚಿನ್ನ ಹಾಗೂ ಮಿಶ್ರ 4*400 ಮೀಟರ್ ರಿಲೇ ಓಟದಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕದ ಖ್ಯಾತ ಓಟಗಾರ್ತಿ ಎಂ.ಆರ್. ಪೂವಮ್ಮ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೂರವಾಣಿ ಕರೆ ಮಾಡಿ ಅಭಿನಂದನೆ ಸಲ್ಲಿಸಿದರು.

ಪೂವಮ್ಮ ಸಾಧನೆಯನ್ನು ಶ್ಲಾಘಿಸಿದ ಅವರು, ಕರ್ನಾಟಕದ ಕ್ರೀಡಾಪಟುಗಳ ಪ್ರತಿಭೆಗೆ ಬೆಂಬಲ ನೀಡಲು ಹಾಗೂ ಅಥ್ಲೀಟ್‌ಗಳು ಇನ್ನಷ್ಟು ಉನ್ನತ ಎತ್ತರಕ್ಕೆ ಬೆಳೆಯಲು ಶಕ್ತಿ ತುಂಬಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಪದಕ ಗೆದ್ದ ಬಳಿಕ ಪೂವಮ್ಮ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ದೇಶಕ್ಕೆ ಮೆಡಲ್ ತಂದುಕೊಟ್ಟಿರುವುದು ನನಗೆ ತುಂಬಾ ಖುಷಿ ನೀಡಿದೆ. ರಾಜ್ಯ ಸರ್ಕಾರದಿಂದ ನಿರೀಕ್ಷಿತ ಪ್ರೋತ್ಸಾಹ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಚು.ಆಯೋಗಕ್ಕೂ ಸತ್ಯ ದರ್ಶನ

ಎಸ್‌ಐಆರ್ ಅಕ್ರಮ ಕುರಿತು ರಾಜ್ಯ ಸರ್ಕಾರ ಪ್ರತ್ಯೇಕ ತನಿಖೆ ಮಾಡಲ್ಲ: ಸಿಎಂ ಡಿ.ಕೆ.ಶಿವಕುಮಾರ್

ಮೈಸೂರು: ರಾಜ್ಯ ಸರ್ಕಾರ ಎಸ್‌ಐಆರ್ ಅಕ್ರಮದ ಬಗ್ಗೆ ಸದ್ಯಕ್ಕೆ ಪ್ರತ್ಯೇಕ ತನಿಖೆ ನಡೆಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪಿರಿಯಾಪಟ್ಟಣ ತಾಲ್ಲೂಕಿನ ಹಿಟ್ನೇಹೆಬ್ಬಾಗಿಲು ಹೆಲಿಪ್ಯಾಡ್‌ನಲ್ಲಿ ಶನಿವಾರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು. ಚುನಾವಣಾ ಆಯೋಗವೇ ಈ ಬಗ್ಗೆ ಈಗ ತನಿಖೆ ಮಾಡುತ್ತಿದೆ. ನಮೂನೆಗಳು ಎಲ್ಲಿ ಮುದ್ರಣವಾದವು? ಹೇಗೆ ಬಿಜೆಪಿಯವರ ಕೈಗೆ ತಲುಪಿದವು ಎಂಬುದೆಲ್ಲಾ ಗೊತ್ತಾಗುತ್ತಿದೆ. ಚುನಾವಣಾ ಆಯೋಗಕ್ಕೂ ಸತ್ಯ ದರ್ಶನ ಆಗಿದೆ. ಅವರು ಏನೇನು ಕ್ರಮ ಕೈಗೊಳ್ಳುತ್ತಾರೆಯೋ ನೋಡೋಣ. ಆ ಬಳಿಕ ನಮ್ಮ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ನಾನು ಚುನಾವಣಾ ಆಯುಕ್ತರ ಕಚೇರಿ ಮುಂದೆ ಧರಣಿ ಮಾಡಿಲ್ಲ. ಯಾವ ಕಾನೂನನ್ನೂ ನಾನು ಉಲ್ಲಂಘಿಸಿಲ್ಲ. ಸಮಸ್ಯೆ ಆಗಿರುವುದನ್ನು ಕಾನೂನಾತ್ಮಕವಾಗಿ ಆಯುಕ್ತರ ಗಮನಕ್ಕೆ ತಂದಿದ್ದೇನೆ. ಇದರಲ್ಲಿ ತಪ್ಪೇನಿದೆ? ಅವರು ಸಮಸ್ಯೆ ಬಗೆ ಚರ್ಚೆ ಮಾಡುವುದಕ್ಕೆ ಸಮಯ ಕೇಳಿದ್ದರು. ಇದಕ್ಕೆಲ್ಲ ಯಾಕೆ ಸಮಯ ಎಂದು ನಾವು ಅಲ್ಲೇ ಕುಳಿತಿದ್ದೆವು. ಕೊನೆಗೂ ಪರಿಹಾರ ಸಿಕ್ಕಿದೆ. ಇದರಲ್ಲಿ ಧರಣಿ ಪ್ರಶ್ನೆ ಎಲ್ಲಿಂದ ಬಂತು? ಎಂದು ಪ್ರಶ್ನಿಸಿದರು.

ಆಯೋಗದ ಕಚೇರಿಯಲ್ಲಿ ನಾನು ತಪ್ಪು ಮಾಡಿದ್ದರೆ ನನ್ನ ಮೇಲೂ ಕೇಸ್ ಹಾಕಲಿ. ಕಾನೂನು ಎಲ್ಲರಿಗೂ ಒಂದೇ. ನಾನು ಜನರ ಪ್ರತಿನಿಧಿಯಾಗಿ ಆಯುಕ್ತರ ಮುಂದೆ ಸಮಸ್ಯೆ ಹೇಳಿದ್ದೇನೆ. ಜನರ ಮತದಾನದ ಹಕ್ಕು ರಕ್ಷಿಸಬೇಕಲ್ಲವೇ? ಇದಕ್ಕಾಗಿ ಅಲ್ಲೇ ಕುಳಿತುಕೊಂಡು ಕೇಳಬೇಕಾಯಿತು ಎಂದು ಡಿಕೆಶಿ ತಿಳಿಸಿದರು.

ಬಿಜೆಪಿಯವರು ತಮ್ಮ ಮೇಲಿನರ ಒತ್ತಡದಿಂದ ಹೇಳಿಕೆ ಕೊಡುತ್ತಿದ್ದಾರೆ. ನನ್ನಿಂದ ಶಾಂತಿ ಭಂಗ ಆಗಿದ್ದರೆ, ಕಾನೂನು ಉಲ್ಲಂಘನೆ ಆಗಿದ್ದರೆ ನನ್ನ ಮೇಲೂ ಕೇಸ್ ಹಾಕಲಿ. ಬಿಜೆಪಿಯವರು ರಾಜಕೀಯಕ್ಕಾಗಿ ಮಾತನಾಡುತ್ತಿದ್ದಾರೆ. ಮಾತನಾಡುವುದು ಬಿಜೆಪಿಗೆ ಅನಿವಾರ್ಯ ಎಂದು ಟೀಕಿಸಿದರು.

ನೈಸ್ ವಿಚಾರದಲ್ಲಿ ಯಾರು ಏನಾದರೂ ಹೇಳಲಿ. ಎಲ್ಲದಕ್ಕೂ ಈ ದೇಶದಲ್ಲಿ ಕಾನೂನು ಇದೆ. ಯಾರದ್ದು ತಪ್ಪು, ಯಾರದ್ದು ಸರಿ ಎಂಬುದನ್ನು ಕಾನೂನು ತೀರ್ಮಾನ ಮಾಡುತ್ತದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಎಲ್ಲದಕ್ಕೂ ಪ್ರತಿಕ್ರಿಯೆ ಕೊಟ್ಟು ವಿಚಾರವನ್ನು ಡೈವರ್ಟ್ ಮಾಡುವುದಿಲ್ಲ. ಕಾನೂನು ಉತ್ತರ ಕೊಡುತ್ತದೆ. ಆ ವಿಚಾರದ ಚರ್ಚೆ ಈಗ ಬೇಡ. ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪಕ್ಕೆ ಉತ್ತರ ಕೊಡುವುದಿಲ್ಲ ಎಂದರು.

ದಸರಾದಲ್ಲಿ ಹೊರ ರಾಜ್ಯದ ಸ್ತಬ್ಧ ಚಿತ್ರಗಳಿಗೂ ಅವಕಾಶ

ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಹೊರ ರಾಜ್ಯದ ಸ್ತಬ್ಧ ಚಿತ್ರಗಳಿಗೂ ಅವಕಾಶ ಇರಲಿದೆ. ಸ್ತಬ್ಧಚಿತ್ರಗಳನ್ನು ಕಳುಹಿಸುವಂತೆ ಮನವಿ ಮಾಡಿದ್ದೇನೆ. ಅದು ಶೀಘ್ರದಲ್ಲೇ ತೀರ್ಮಾನ ಆಗುತ್ತದೆ. ನೆರೆ ರಾಜ್ಯಗಳ ಮುಖ್ಯಮಂತ್ರಿಗಳಿಗೂ ಆಹ್ವಾನ ಕೊಟ್ಟಿದ್ದೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಮ್ಮ ರಾಜ್ಯದ ನೀರು ಹೊರ ರಾಜ್ಯಕ್ಕೆ ಹೋಗುತ್ತದೆ. ನಮ್ಮ ತರಕಾರಿ ಹೊರ ರಾಜ್ಯಕ್ಕೆ ಹೋಗುತ್ತದೆ. ನಮ್ಮ ಭರತ ನಾಟ್ಯವನ್ನು ವಿದೇಶದಲ್ಲಿ ಮಾಡುತ್ತಾರೆ. ಪಕ್ಕದ ರಾಜ್ಯದ ಕಲೆಯನ್ನು ನಮ್ಮ ಉತ್ಸವದಲ್ಲಿ ಬಿಂಬಿಸುವುದು ಬೇಡವೇ? ಮೆರವಣಿಗೆಗೆ ಬರುವಂತೆ ಪುಟ 2ಕ್ಕೆ

ಹೆಚ್ಚು ಪರಿಹಾರ ಭರವಸೆ: ಸಿಎಂ

ರಾಜ್ಯದಲ್ಲಿತ ತೀವ್ರ ಬರಗಾಲ ಬಂದಿದೆ. ಅದನ್ನು ಕೇಂದ್ರದ ತಂಡಕ್ಕೆ ಗಮನಕ್ಕೆ ತಂದಿದ್ದೇನೆ. ಅವರ ಜೊತೆ ಒಂದು ಗಂಟೆ ಸಭೆ ನಡೆಸಿದ್ದೇನೆ. ನಮ್ಮ ಪರಿಸ್ಥಿತಿಯನ್ನು ವಿವರಿಸಿದ್ದೇನೆ. ಮೂರು ಟೀಂಗಳಲ್ಲಿ ಅವರು ಪ್ರವಾಸ ಮಾಡುತ್ತಾರೆ. ನಾವು ಪರಿಹಾರಕ್ಕಾಗಿ ಈ ಬಾರಿ ಸೌಹಾರ್ದಯುತವಾಗಿ ಪಡೆಯಬೇಕೆಂಬುದು ನಮ್ಮ ಆಸೆ. ಅದಕ್ಕಾಗಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದೇನೆ. ನಾನು ಅವಸರದಲ್ಲಿ ಹೆಚ್ಚೆ ಇಡುವುದಿಲ್ಲ. ಹೆಚ್ಚು ಪರಿಹಾರ ಸಿಗುವ ಭರವಸೆ ಇದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

ಜನರಿಗಾಗಿ ಪ್ರಜಾಸೇವೆ ಅಭಿಯಾನ

ನ್ಯಾಯಾಲಯ ಸಂಬಂಧಿತ ಸಮಸ್ಯೆಗಳಿಗೆ ಉಚಿತ ಸೇವೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಮೈಸೂರು: ನ್ಯಾಯಾಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಉಚಿತ ಸೇವೆ ಒದಗಿಸಲು ಪ್ರಜಾಸೇವೆ ಅಭಿಯಾನದಲ್ಲಿ ಪ್ರತ್ಯೇಕ ಕಾನೂನು ಕೇಂದ್ರ ಆರಂಭಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಶನಿವಾರ ಪ್ರಜಾಸೇವೆ ಅಭಿಯಾನದಲ್ಲಿ ಮೂರು ತಾಸು ಸಾರ್ವಜನಿಕರ ಅಹವಾಲು ಸ್ವೀಕರಿಸಿ ಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವ ಭರವಸೆ ನೀಡಿದರು. ಕೆಲವು ಪ್ರಕರಣಗಳಲ್ಲಿ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ತಾಲ್ಲೂಕಿನಲ್ಲಿ ನ್ಯಾಯಾಲಯದಲ್ಲಿ ಕಾನೂನು ನೆರವು ನೀಡುವ ವಿಭಾಗವಿದೆ. ಅವರಿಂದ ಈ ಕಾರ್ಯಕ್ರಮದಲ್ಲಿ ಒಂದು ಕೇಂದ್ರ ಆರಂಭಿಸಲಾಗಿದೆ. ಕಾನೂನಿನಲ್ಲಿ ತೊಡಕಿದ್ದರೆ ಉಚಿತವಾಗಿ ಸಹಾಯ ಮಾಡಲಾಗುವುದು. ದೇಶದಲ್ಲಿ ಬೇರಾವುದೇ ರಾಜ್ಯವೂ ಮಾಡದ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದು ಹೇಳಿದರು.

ಜನರ ಸಮಸ್ಯೆಗಳಿಗೆ ಪುಟ 2ಕ್ಕೆ

ಎಸ್‌ಐಆರ್ ಮೂಲಕ ಬಿಜೆಪಿ ಕುತಂತ್ರ

ಚುನಾವಣೆಯಲ್ಲಿ ಜನರ ಹೃದಯವನ್ನು ಗೆಲ್ಲಬೇಕು. ಅದು ಬಿಟ್ಟು ಬಿಜೆಪಿಯವರು ಎಸ್‌ಐಆರ್ ಮೂಲಕ ಮೋಸ, ಕುತಂತ್ರದಿಂದ ಚುನಾವಣೆ ಗೆಲ್ಲಲು ತಂತ್ರ ಹೂಡಿ ದೇಶಕ್ಕೆ ಹಾಗೂ ಪ್ರಧಾನಿ ಅವರಿಗೆ ಅಪಮಾನ ಮಾಡಲು ಹೊರಟಿದ್ದಾರೆ. ಸಂವಿಧಾನ ವಿರೋಧಿ ನೀತಿಯಲ್ಲಿ ತೊಡಗಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ದೂರಿದರು. ಗ್ರಾಮಗಳಲ್ಲಿ ಮುಕ್ತಧಾಮ ಯೋಜನೆಯಡಿ ಸ್ಮಶಾನಗಳ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮ ರೂಪಿಸಲಾಗಿದೆ. ಜನರು ಪುಟ 2ಕ್ಕೆ

ಪ್ರಮೋದಾದೇವಿಗೆ ದಸರಾಗೆ ಆಹ್ವಾನ

ಮೈಸೂರು: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ನಾಡಹಬ್ಬ ದಸರಾ ಮಹೋತ್ಸವದಲ್ಲಿ ಭಾಗವಹಿಸಲು ಜಿಲ್ಲಾಡಳಿತದಿಂದ ಅಧಿಕೃತ ಆಹ್ವಾನ ನೀಡಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಅರಮನೆಯಲ್ಲಿರುವ ನಿವಾಸದಲ್ಲಿ ಪ್ರಮೋದಾದೇವಿ ಅವರನ್ನು ಭೇಟಿಯಾಗಿ ಸಾಂಪ್ರದಾಯಿಕವಾಗಿ ಫಲತಾಂಬೂಲ ಹಾಗೂ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಿದರು.

ಪ್ರತಿ ಬಾರಿಯಂತೆ ಅಧಿಕೃತವಾಗಿ ಆಹ್ವಾನ ನೀಡಲಾಗಿದೆ. ರಾಜಮನೆತನದಿಂದ ದಸರಾ ಆಚರಣೆಗೆ ಸಂಪೂರ್ಣ ಸಹಕಾರ ಕೊಡುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೆ, ಅಂಬಾರಿ ಕಟ್ಟುವ ಸಮಯದಲ್ಲಿ ಕಳೆದ ಬಾರಿ ಹೆಚ್ಚಿನ ಜನಸಂದಣಿಯಿಂದ ವಿಳಂಬ ಆಗಿದ್ದನ್ನು ನೆನಪಿಸಿದ ಅವರು, ಈ ಬಾರಿ ಅಂಬಾರಿ ಕಟ್ಟುವ ಜಾಗದಲ್ಲಿ ಕಡಿಮೆ ಜನರಿಗೆ ಅವಕಾಶ ನೀಡಿ ಸುಸೂತ್ರವಾಗಿ ಪ್ರಕ್ರಿಯೆ ನಡೆಸಬೇಕು ಎಂದು ಸಲಹೆ ನೀಡಿದ್ದಾರೆಂದು ಸಚಿವ ಯತೀಂದ್ರ ತಿಳಿಸಿದರು.

'ಸತ್ಯಾಗ್ರಹ' ಡಿಜಿಟಲ್ ವೇದಿಕೆ ಆರಂಭಿಸಿದ ರಾಹುಲ್ ಗಾಂಧಿ

ನವದೆಹಲಿ: ದೇಶಾದ್ಯಂತ ಅನ್ಯಾಯದ ವಿರುದ್ಧ ನಡೆಯುತ್ತಿರುವ ಹೋರಾಟಗಳನ್ನು ದಾಖಲಿಸಿ, ಜನರ ಧ್ವನಿಯನ್ನು ರಾಷ್ಟ್ರೀಯ ಮಟ್ಟಕ್ಕೆ ತಲುಪಿಸುವ ಉದ್ದೇಶದಿಂದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ 'ಸತ್ಯಾಗ್ರಹ' ಹೆಸರಿನ ಹೊಸ ಡಿಜಿಟಲ್ ವೇದಿಕೆ ಆರಂಭಿಸಿದ್ದಾರೆ.



ಗಾಂಧಿ ಜಯಂತಿ ಹಿನ್ನೆಲೆಲ್ಲಿ ಸತ್ಯ, ಅಹಿಂಸೆ ಹಾಗೂ ಅನ್ಯಾಯದ ವಿರುದ್ಧ ನಿರ್ಭೀತ ಪ್ರತಿರೋಧದ ಆಶಯಗಳನ್ನು ಪುಟ 2ಕ್ಕೆ

ಕಾರು ಡಿಕ್ಕಿ: ಯುವತಿ ಸಾವು

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಶುಕ್ರವಾರ ತಡರಾತ್ರಿ ಭೀಕರ ಅಪಘಾತ ಸಂಭವಿಸಿದೆ. ರಸ್ತೆ ದಾಟುತ್ತಿದ್ದ ಯುವತಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಯುವತಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೃತ ಯುವತಿಯನ್ನು ಕುಂಬಳಗೂಡು ಸಮೀಪದ ರಾಮೋಹಳ್ಳಿ ಗ್ರಾಮದ ಭೂಮಿಕಾ (22) ಎಂದು ಗುರುತಿಸಲಾಗಿದೆ. ಚನ್ನಪಟ್ಟಣ ತಾಲೂಕಿನ ಸಂಕಲಗೆರೆ ಬಳಿ ಅಪಘಾತ ಸಂಭವಿಸಿದೆ.

ಭೂಮಿಕಾ ಸ್ನೇಹಿತರೊಂದಿಗೆ ಚನ್ನಪಟ್ಟಣಕ್ಕೆ ಆಗಮಿಸಿದ್ದರು. ತಡರಾತ್ರಿ ಸಂಕಲಗೆರೆ ಬಳಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ರಸ್ತೆ ದಾಟಲು ಯತ್ನಿಸುತ್ತಿದ್ದಾಗ, ಅತಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ತೀವ್ರ ರಕ್ತಸ್ರಾವವಾಗಿ ಯುವತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೈಲಟ್ ಸ್ಮಿತ್‌ಗೆ 1 ಕೋಟಿ ಘೋಷಣೆ

ನವದೆಹಲಿ: ತನ್ನ ಜೀವದ ಹಂಗು ತೊರೆ

ಮೊದಲ ಪುಟದಿಂದ

ಹೊರ ರಾಜ್ಯದ ಚಿತ್ರಗಳಿಗೂ ಅವಕಾಶ

ಸಿನಿಮಾ ರಂಗದವರಿಗೂ ಹೇಳಿದ್ದೇನೆ. ದಸರಾದಲ್ಲಿ ಹೊಸತನ ಬರಬೇಕೆಂಬುದು ನನ್ನ ಆಸೆ ಎಂದು ತಿಳಿಸಿದರು. ಏರ್ ಶೋ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ರಕ್ಷಣಾ ಸಚಿವರನ್ನು ಭೇಟಿಯಾಗಿ ಸೇನಾ ತುಕಡಿಗಳನ್ನು ಕಳುಹಿಸುವಂತೆ ಮನವಿ ಮಾಡಿದ್ದೇನೆ. ಎಲ್ಲವೂ ಅಂತಿಮವಾಗುತ್ತಿದೆ ಎಂದರು.

ಬಿಜೆಪಿ ಕುತಂತ್ರ

ಸ್ಪಂದಿಸಲು ಮಂತ್ರಿಗಳು, ಶಾಸಕರು, ಅಧಿಕಾರಿಗಳು ಅವರ ಮನೆ ಬಾಗಿಲಿಗೆ ಹೋಗಲೆಂದು ಈ ಅಭಿಯಾನ ನಡೆಸಲಾಗುತ್ತಿದೆ ಎಂದು ಹೇಳಿದರು. ಸೆ.5ರಂದು ಈ ಇಲಾಖೆ ಆರಂಭಿಸಲಾಗಿದೆ. ಈಗಾಗಲೇ 620 ಕಡೆ ಪ್ರಜಾಸೇವೆ ಅಭಿಯಾನ ನಡೆದಿದೆ. ಒಂದು ಲಕ್ಷಕ್ಕೂ ಹೆಚ್ಚು ಜನ ಅರ್ಜಿ ಸಲ್ಲಿಸಿದ್ದಾರೆ. ಕಂದಾಯ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಹೆಚ್ಚು ಅರ್ಜಿಗಳು ಬರುತ್ತಿವೆ.

ಶಾಸ ಕರು ಹೋಗಿದ್ದರೆ, ಅಧಿಕಾರಿಗಳೇ ತೆರಳಿ ಜನರ ಸಮಸ್ಯೆ ಆಲಿಸಬೇಕೆಂದು ಸೂಚಿಸಿದ್ದೇನೆ ಎಂದರು. ಸಚಿವರಾದ ಈಶ್ವರ ಖಂಡ್ರೆ, ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ ಕೆ.ವೆಂಕಟೇಶ್ ಇದ್ದರು.

ಎಸ್‌ಐಆರ್ ಮೂಲಕ ಕುತಂತ್ರ

ಅರಣ್ಯ ಪ್ರದೇಶ ಒತ್ತುವರಿ ಮಾಡಬಾರದು. ಬಗರ್ ಹುಕುಂ ಮೊದಲಾದ ಕಾನೂನುಬದ್ಧ ಅರ್ಜಿಗಳ ವಿಲೇವಾರಿಗೆ ಮಾರ್ಗದರ್ಶನ ನೀಡಲಾಗುವುದು. ಯಾರನ್ನೂ ಒಕ್ಕಲೆಬ್ಬಿಸದಂತೆ ಸೂಚಿಸಲಾಗುವುದು ಎಂದು ಸಿಎಂ ಹೇಳಿದರು.

'ಸತ್ಯಾಗ್ರಹ' ಡಿಜಿಟಲ್ ವೇದಿಕೆ

ಹೋರಾಟಗಳಿಗೆ ಸಂಪರ್ಕಿಸುವ ಉದ್ದೇಶ ಹೊಂದಿದೆ. ದೇಶದ ವಿವಿಧ ಭಾಗಗಳಲ್ಲಿ ಜನರು ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ವಿವಿಧ ಹೋರಾಟಗಳನ್ನು ಸಂಘಟಿಸಿ, ಒಂದೇ ನಕ್ಷೆಯಲ್ಲಿ ದಾಖಲಿಸಿ, ಹೋರಾಟಗಾರರೊಂದಿಗೆ ಕೈಜೋಡಿಸಿ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನೆರವಾಗುವುದು ವೇದಿಕೆ ಉದ್ದೇಶವಾಗಿದೆ ಎಂದು ರಾಹುಲ್ ಹೇಳಿದರು. 'ಸತ್ಯಾಗ್ರಹ' ವೆಬ್‌ಸೈಟ್ ಆರಂಭದ ಕುರಿತು ಮಾತನಾಡಿರುವ ರಾಹುಲ್ ಗಾಂಧಿ, ದೇಶದಾದ್ಯಂತ ಜನರು ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಪ್ರತಿಪಕ್ಷ ನಾಯಕನಾಗಿ ಜನರ ಹೋರಾಟವೂ ತಮ್ಮ ಹೋರಾಟವೇ ಆಗಿದೆ. ಜನರು ತಾವು ಯಾವ ವಿಚಾರಕ್ಕಾಗಿ ಹೋರಾಡುತ್ತಿದ್ದಾರೆ ಎಂಬುದನ್ನು ತಿಳಿಸುವಂತೆ ಕರೆ ನೀಡಿದ್ದಾರೆ. ಜನರ ಸಮಸ್ಯೆಗಳನ್ನು ಆಲಿಸಲು ತಾವು ಸಿದ್ಧರಿರುವುದಾಗಿ ನುಡಿದರು.

ಕರ್ನಾಟಕದಲ್ಲಿ ತೀವ್ರ ಬರ: ನೆರವಿಗೆ ಮೋದಿಗೆ ಮಲ್ಲಿಕಾರ್ಜುನ್ ಖರ್ಗೆ ಪತ್ರ

ನವದೆಹಲಿ: ಕರ್ನಾಟಕದಲ್ಲಿ ತೀವ್ರ ಬರ ಪರಿ ಸ್ಥಿತಿ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಗೆ ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭಾ ವಿಪಕ್ಷ ನಾಯಕ ಮಲ್ಲಿಕಾರ್ಜುನ್ ಖರ್ಗೆ ಪತ್ರ ಬರೆದಿದ್ದಾರೆ.

ಕರ್ನಾಟಕದಲ್ಲಿ ಸೆಪ್ಟೆಂಬರ್‌ವರೆಗೆ ಶೇ. 58ರಷ್ಟು ಮಳೆ ಕೊರತೆಯಾಗಿದೆ. ವ್ಯಾಪಕ ಬೆಳೆ ಹಾನಿಯಾಗಿ ಲಕ್ಷಾಂತರ ರೈತ ಕುಟುಂಬ ಗಳು ಸಂಕಷ್ಟ ದಲ್ಲಿವೆ. ಕರ್ನಾಟಕಕ್ಕೆ 3,705.30 ಕೋಟಿ ರೂ. ನೆರವು ಬಿಡುಗಡೆ ಮಾಡಿ ಎಂದು ಪ್ರಧಾನಿಗೆ ಖರ್ಗೆ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಬರದಿಂದ 18,748.23 ಕೋಟಿ ರೂ. ನಷ್ಟ ಅಂದಾಜಿಸಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ತಕ್ಷಣ ಕೇಂದ್ರ ತಂಡ ಕಳುಹಿಸಿ ಬರ ಹಾನಿ ಪರಿಶೀಲಿಸಬೇಕು. ಹಳೆಯ 2015-16 ಕೃಷಿ ಗಣತಿ ಬದಲಿಗೆ ನವೀಕೃತ ಭೂಮಿ ದಾಖಲೆ ಆಧರಿಸಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇನ್‌ಪುಟ್ ಸಬ್ಸಿಡಿ ನೀಡಬೇಕು. ಹೆಚ್ಚುವರಿ 11 ತಾಲೂಕುಗಳ ಬರ ಘೋಷಣೆ ಪ್ರಕ್ರಿಯೆ ತ್ವರಿತಗೊಳಿಸಬೇಕು. ಕುಡಿಯುವ ನೀರು ಹಾಗೂ ಪರ್ಯಾಯ ವಿದ್ಯುತ್ ವೆಚ್ಚಕ್ಕೆ ಹೆಚ್ಚಿನ ಕೇಂದ್ರ ನೆರವು ನೀಡುವಂತೆ ಆಗ್ರಹಿಸಿದ್ದಾರೆ.

31 ಲಕ್ಷಕ್ಕೂ ಅಧಿಕ ರೈತ ಕುಟುಂಬಗಳ ಸಂಕಷ್ಟ ಗಮನಿಸಿ ರಾಜಕೀಯ ಪರಿಗಣನೆ ಇಲ್ಲದೆ ತುರ್ತಾಗಿ ನೆರವು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ. ಈ ಮನವಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಕಳುಹಿಸಿರುವುದಾಗಿ ಖರ್ಗೆ ತಿಳಿಸಿದ್ದಾರೆ.

ತಾಲೂಕು ಮಟ್ಟದ ಕ್ರೀಡಾಕೂಟ

ಹನೂರು: ಪಟ್ಟಣದ ಮಲೆ ಮಹದೇಶ್ವರ ಕ್ರೀಡಾಂಗಣದಲ್ಲಿ ತಾಲೂಕು ಕ್ಷೇತ್ರ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ 14 ಮತ್ತು 17 ವರ್ಷದೊಳಗಿನ ಶಾಲಾ ಮಕ್ಕಳ ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಹನೂರು ಶಾಸಕ ಎಂ.ಆರ್. ಮಂಜುನಾಥ್ ಅವರು ಚಾಲನೆ ನೀಡಿದರು.

ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಸಕರು, "ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಮೊಬೈಲ್, ಟಿವಿಗಳಲ್ಲಿ ಕಾಲ ಕಳೆಯುವುದಕ್ಕಿಂತ ಮಕ್ಕಳು ಕ್ರೀಡೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು. ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ಸದೃಢತೆ ವೃದ್ಧಿಯಾಗುತ್ತದೆ. ಗ್ರಾಮೀಣ ಭಾಗದ ಮಕ್ಕಳಲ್ಲಿ ಅಪಾರ ಪ್ರತಿಭೆ ಇದೆ, ಅಂತಹ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಶಿಕ್ಷಣ ಇಲಾಖೆ ಮಾಡುತ್ತಿರುವುದು ಶ್ಲಾಘನೀಯ.

ಈ ಕ್ರೀಡಾಕೂಟದಲ್ಲಿ ಗೆದ್ದ ಮಕ್ಕಳು ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ತಾಲೂಕಿಗೆ ಕೀರ್ತಿ ತರಬೇಕು. ಕ್ರೀಡಾಂಗಣದ ಅಭಿವೃದ್ಧಿಗೆ ಅಗತ್ಯ ಅನುದಾನವನ್ನು ತಂದುಕೊಡುವುದಾಗಿ" ಭರವಸೆ ನೀಡಿದರು. ಕ್ರೀಡಾಕೂಟದಲ್ಲಿ ತಾಲೂಕಿನ ವಿವಿಧ ಸರ್ಕಾರಿ, ಅನುದಾನಿತ ಮತ್ತು ಖಾಸಗಿ

ಶಾಲೆಗಳ ನೂರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಓಟ, ಗುಂಡು ಎಸೆತ, ಉದ್ದ ಜಿಗಿತ, ಎತ್ತರ ಜಿಗಿತ, ವಾಲಿಬಾಲ್, ಕಬಡ್ಡಿ, ಖೋ-ಖೋ ಸೇರಿದಂತೆ ವಿವಿಧ ಕ್ರೀಡೆಗಳು ನಡೆದವು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರತಿಭಾ, ಕ್ಷೇತ್ರ ಸಮನ್ವಯಾಧಿಕಾರಿ ವೆಂಕಟೇಶ್, ತಾಲೂಕು ದೈಹಿಕ ಪರಿವೀಕ್ಷಕರಾದ ಚಂದ್ರಶೇಖರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾದೇಶ್, ಬಿಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಶಿವಮಲ್ಲು, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಗಿರೀಶ್, ಕಾರ್ಯದರ್ಶಿ ಕಾಂತರಾಜ್, ಮುಖಂಡರಾದ ನಟರಾಜು ಗೌಡ ಶಿಕ್ಷಕರು, ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಸೇತುವೆ ನಿರ್ಮಾಣಕ್ಕೆ ಭೂಮಿಪೂಜೆ

ಚಾಮರಾಜನಗರ: ತಾಲೂಕಿನ ನಾಗವಳ್ಳಿ ಗ್ರಾಮದಲ್ಲಿ 2. ಕೋಟಿ ರೂ.ವೆಚ್ಚದ ಸೇತುವೆ ಕಾಮಗಾರಿಗೆ ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಸಚಿವರು ಮಾತನಾಡಿ, ಗ್ರಾಮಸ್ಥರ ಮನವಿಯಂತೆ ಗ್ರಾಮದಲ್ಲಿ ಸೇತುವೆ ನಿರ್ಮಾಣಕ್ಕೆ ಮುಂದಾಗಿದ್ದು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ 2 ಕೋಟಿ ಸೇತುವೆ ನಿರ್ಮಾಣಕ್ಕೆ ಮಂಜೂರಾಗಿದ್ದು, ಇಂದು ಗುದ್ದಲಿಪೂಜೆ ಮಾಡಲಾಗಿದೆ. ಒಂದು ಉತ್ತಮ ಸೇತುವೆ ನಿರ್ಮಾಣವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ, ಕನಿಷ್ಠ ವೇತನ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಎಸ್.ಪಿಕೆ ಉಮೇಶ್,ತಾ.ಪಂ.ಮಾಜಿ ಅಧ್ಯಕ್ಷ ಚಿಕ್ಕ ಮಹದೇವು, ಎಇಇ ಶಾಂತಮ್ಮ, ಮುಖಂಡರಾದ ನಾಗಯ್ಯ, ಶಿವಕುಮಾರ್, ಕಮಲ್ ಖಾನ್, ಕೋಡಿಮೋಳೆ ಪ್ರಕಾಶ್,ರಂಗಸ್ವಾಮಿ, .ಮುದ್ದ ಮಲ್ಲಯ್ಯ, ಎನ್.ಜಿ.ಬಸವರಾಜು ಸೇರಿದಂತೆ ಇತರರ ಹಾಜರಿದ್ದರು.

ಇಂಜಿನಿಯರ್ಸ್ ಭವಿಷ್ಯ ರೂಪಿಸುವ ಶಿಲ್ಪಿಗಳು

ಸಚಿವ ಚಲುವರಾಯಸ್ವಾಮಿ ಅಭಿಮತ | 41ನೇ 'ನ್ಯಾಷನಲ್ ಕನ್ವೆನ್ಷನ್ ಆಫ್ ಸಿವಿಲ್ ಇಂಜಿನಿಯರಿಂಗ್'

ಮೈಸೂರು: ಇಂಜಿನಿಯರ್ ಎಂದರೆ ಕೇವಲ ಕಟ್ಟಡ ಕಟ್ಟುವ ವ್ಯಕ್ತಿಯಲ್ಲ, ಇಂಜಿನಿಯರ್ ಎಂದರೆ ದೇಶದ ಭವಿಷ್ಯ ಕಟ್ಟುವ ಶಿಲ್ಪಿ. ಸುಭದ್ರ ಭವಿಷ್ಯ ನಿರ್ಮಾಣದಲ್ಲಿ ಇಂಜಿನಿಯರ್‌ಗಳ ಸಮರ್ಪಣಾ ಮನೋಭಾವ ಅತ್ಯಂತ ಮಹತ್ವದ್ದು ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ವತಿಯಿಂದ ನಗರದ ಜೆ.ಎಲ್.ಬಿ. ರಸ್ತೆಯಲ್ಲಿರುವ ಸರ್ ಎಂ.ವಿ.ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 41ನೇ 'ನ್ಯಾಷನಲ್ ಕನ್ವೆನ್ಷನ್ ಆಫ್ ಸಿವಿಲ್ ಇಂಜಿನಿಯರಿಂಗ್' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಜ್ಞಾನವನ್ನು ಗಳಿಸುವುದು ಎಷ್ಟು ಮುಖ್ಯವೋ, ಅದನ್ನು ಸಮಾಜದ ಹಿತಕ್ಕಾಗಿ ಸದ್ಬಳಕೆ ಮಾಡಿಕೊಳ್ಳುವುದು ಅಷ್ಟೇ ಪ್ರಮುಖ. ನಾವು ನಿತ್ಯವೂ ಸಂಚರಿಸುವ ರಸ್ತೆ, ಸೇತುವೆ, ಮನೆ ಬಾಗಿಲಿಗೆ ಬರುವ ನೀರು, ವಿದ್ಯುತ್ ಹಾಗೂ ಅಂಗೈಯಲ್ಲಿರುವ ಮೊಬೈಲ್ ಪ್ರಪಂಚ?ಇವೆಲ್ಲವೂ ನಿತ್ಯಜೀವನದ ಸಹಜ ಭಾಗವೆನಿಸಬಹುದು. ಆದರೆ, ಈ ಪ್ರತಿಯೊಂದು ಸೌಲಭ್ಯದ ಹಿಂದೆಯೂ ಸಾವಿರಾರು ಇಂಜಿನಿಯರ್‌ಗಳ ಜ್ಞಾನ, ಕಠಿಣ ಪರಿಶ್ರಮ, ಯೋಜನೆ ಹಾಗೂ ಹೊಣೆಗಾರಿಕೆ ಅಡಗಿದೆ" ಎಂದರು. ಜಗತ್ತು ಇಂದು ತೀವ್ರ ಗತಿಯಲ್ಲಿ ಬದಲಾಗುತ್ತಿದ್ದು, ಕೃತಕ ಬುದ್ಧಿಮತ್ತೆ (ಎಐ), ರೊಬೊಟಿಕ್ಸ್, ಸೆಮಿಕಂಡಕ್ಟರ್, ಹಸಿರು ಇಂಧನ, ಎಲೆಕ್ಟ್ರಿಕ್ ವಾಹನಗಳು ಹಾಗೂ ಬಾಹ್ಯಾಕಾಶ ತಂತ್ರಜ್ಞಾನಗಳು ನಮ್ಮ ಬದುಕಿನ ದಿಕ್ಕನ್ನೇ ಬದಲಿಸುತ್ತಿವೆ. ಈ ನೂತನ ತಾಂತ್ರಿಕ ಯುಗದಲ್ಲಿ ಕರ್ನಾಟಕದ ಪಾತ್ರ ಅಗ್ರಗಣ್ಯವಾಗಿದೆ. ರಾಜ್ಯದ ಪ್ರತಿಯೊಂದು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಅಪಾರ ಪ್ರತಿಭೆ, ಹೊಸ ಆಲೋಚನೆ ಹಾಗೂ ಕನಸುಗಳಿವೆ. ಅವುಗಳಿಗೆ ಆಧುನಿಕ ತಂತ್ರಜ್ಞಾನದ ಬಲ ತುಂಬುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಭಿವೃದ್ಧಿ ಎಂದರೆ ಕೇವಲ ಬೃಹತ್ ಯೋಜನೆಗಳಷ್ಟೇ ಅಲ್ಲ, ರೈತನ ಜಮೀನಿಗೆ ಸಕಾಲದಲ್ಲಿ ನೀರು ಒದಗಿಸುವುದು, ವಿದ್ಯಾರ್ಥಿಗೆ ಗುಣಮಟ್ಟದ ಡಿಜಿಟಲ್ ಶಿಕ್ಷಣ ನೀಡುವುದು, ಗ್ರಾಮಕ್ಕೆ ಸುಸಜ್ಜಿತ ರಸ್ತೆ ಸಂಪರ್ಕ ಕಲ್ಪಿಸುವುದು ಹಾಗೂ ಯುವಜನತೆಗೆ ಕೌಶಲ ಆಧಾರಿತ ಉದ್ಯೋಗಾವಕಾಶ ಕಲ್ಪಿಸುವುದೇ ನೈಜ ಪ್ರಗತಿ. ಇಂತಹ ಪ್ರತಿಯೊಂದು ಜನಪರ ಅಭಿವೃದ್ಧಿಯ ಹೆಜ್ಜೆಯಲ್ಲೂ ಇಂಜಿನಿಯರ್‌ಗಳ ಕೊಡುಗೆ ಅನನ್ಯವಾಗಿದೆ ಎಂದರು. ವೇದಿಕೆ ಕಾರ್ಯಕ್ರಮದ ಬಳಿಕ "ಸುಸ್ಥಿರ ಭಾರತ ನಿರ್ಮಾಣಕ್ಕೆ ಸಿವಿಲ್ ಇಂಜಿನಿಯರ್‌ಗಳ ಕೊಡುಗೆ – 2047" ವಿಷಯ ಕುರಿತು ಇಂಜಿನಿಯರ್‌ಗಳೊಂದಿಗೆ ಸಚಿವರು ಸಂವಾದ ನಡೆಸಿದರು. ಕಾರ್ಯಕ್ರಮದಲ್ಲಿ ಸಿವಿಡಿಬಿ ಚೇರ್ಮನ್ ಪಿ.ಸೂರ್ಯಪ್ರಕಾಶ್, ಸಂಸ್ಥೆಯ ಪದಾಧಿಕಾರಿಗಳಾದ ಸೀತಾರಾಮ್, ನಾಗರಾಜ್, ಎಚ್.ಎಸ್.ಸುರೇಶ್ ಬಾಬು, ನಂಜಯ್ಯ, ನಿವೃತ್ತ ಮುಖ್ಯ ಇಂಜಿನಿಯರ್ ಮಹದೇವ್, ಅಖಿಲ ಭಾರತ ಇಂಜಿನಿಯರ್ ಸಂಸ್ಥೆಯ ಮಾಜಿ ಅಧ್ಯಕ್ಷ ವಿ.ಬಿ.ಸಿಂಗ್ ಸೇರಿ ಇತರರು ಉಪಸ್ಥಿತರಿದ್ದರು.

ಎಚ್‌ಡಿಕೆಗೆ ಪ್ರಧಾನಿ ಕೆಲಸವನ್ನೇ ಕೊಟ್ಟಿಲ್ಲ ಅನ್ಸುತ್ತೆ

ಮೈಸೂರು: "ಕಳೆದ ಮೂರು ತಿಂಗಳಿಂದ ಅವರು ಮಾಡುತ್ತಿರುವುದು ಸರಿಯೇ? ಪ್ರಧಾನಿಗಳು ಅವರಿಗೆ ಕೆಲಸವನ್ನೇ ನೀಡಿಲ್ಲ ಅನ್ನಿಸುತ್ತದೆ. ವಾರ ಪೂರ್ತಿ ಬೆಂಗಳೂರಿನ ಮಾಧ್ಯಮಗಳ ಮುಂದೆಯೇ ಇರುತ್ತಾರೆ ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಅವರು ಕೇಂದ್ರ ಸಚಿವ ಎಚ್. ಡಿ.ಕುಮಾರ ಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಸಚಿವನಾದ ದಿನದಿಂದಲೂ ಒಂದು ಗಂಟೆಯೂ ಪುರುಸೊತ್ತು ಸಿಗುತ್ತಿಲ್ಲ. ಕೇಂದ್ರ ಮಂತ್ರಿಯಾಗಿರುವ ಅವರಿಗೆ ಯಾವ ಕೆಲಸವೂ ಇಲ್ಲವೇ? ಅವರಿಗೆ ತಲೆಯಲ್ಲಿ ಬುದ್ಧಿ ಇರಬೇಕು. ಅವರು ಮಾಡುತ್ತಿರುವುದು ಸರಿಯಾಗಿದೆಯೇ ಎಂದು ನೀವೇ (ಪತ್ರಕರ್ತರು) ಹೇಳಿ. ನೀವು ಸರಿಯಾಗಿದೆ ಎಂದರೆ ನಾನೇ ಅವರನ್ನು ಅಭಿನಂದಿಸುತ್ತೇನೆ. "ಇನ್ನೊಬ್ಬರ ಬಗ್ಗೆ ದ್ವೇಷ ಸಾಧಿಸುತ್ತಿದ್ದರೆ ಕೆಲಸ ಮಾಡುವುದು ಹೇಗೆ? ನಾನು ಕುಮಾರಸ್ವಾಮಿ ಆಗುವುದಿಲ್ಲ, ಚಲುವರಾಯಸ್ವಾಮಿ ಆಗಿಯೇ ಇರುತ್ತೇನೆ. ಸಿಕ್ಕಿರುವ ಸಮಯದಲ್ಲಿ ಜನರಿಗಾಗಿ ಕೆಲಸ ಮಾಡಿದರೆ ಸಾಕು, ಅಷ್ಟನ್ನೇ ನಾನು ಮಾಡುತ್ತೇನೆ. ಅವರ ರೀತಿ ಬಾಯಿ ಚಪಲಕ್ಕೆ ಮಾತನಾಡುವವನು ನಾನಲ್ಲ" ಎಂದು ತಿರುಗೇಟು ನೀಡಿದರು. ವಿರೋಧ ಪಕ್ಷದ ನಾಯಕನಾಗಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಅದನ್ನು ಬಿಟ್ಟು ಎಸ್‌ಐಆರ್‌ನಲ್ಲಿ ನಡೆದಿರುವ ಅಕ್ರಮಗಳ ಪರ ಮಾತನಾಡುವವರಿಗೆ ಯಾವ ಮರ್ಯಾದೆ ಇದೆ. "ಎಸ್‌ಐಆರ್‌ನಲ್ಲಿ ಅಕ್ರಮಗಳ ಸರಣಿಯೇ ನಡೆದಿದೆ. ಬಿಎಲ್‌ಒಗಳು 450ಕ್ಕೂ ಹೆಚ್ಚು ಫಾರಂ ನಂಬರ್ 7 ವಿತರಣೆ ಮಾಡಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ? ದೇಶದ ಸಂವಿಧಾನದ ಪಾವಿತ್ರ್ಯತೆ ಕಾಪಾಡಿಕೊಳ್ಳಬೇಕಾದ ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ಅಕ್ರಮ ಎಸಗಿದೆ. ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಹೀಗಾಗಿ, ಕರ್ನಾಟಕದ ಪರ ಮಾತನಾಡಬೇ ಕಿರುವ ವಿರೋಧ ಪಕ್ಷದ ನಾಯಕರು ಕೇಂದ್ರದ ಪರವಾಗಿ ಮಾತನಾಡುತ್ತಿದ್ದಾರೆ. ಇಂತಹವರಿಗೆ ಯಾವ ಜನಪರ ಕಾಳಜಿ ಇದೆ? ಯಾವ ಮರ್ಯಾದೆ ಇದೆ? ಇದೇ ಹಾದಿಯಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಕೆಲವರಿದ್ದಾರೆ" ಎಂದು ಟೀಕಿಸಿದರು.

"ಮೂಲ ಕಾಂಗ್ರೆಸಿಗರು ಮಾತನಾಡುತ್ತಿಲ್ಲ, ವಲಸಿಗರೇ ಮಾತನಾಡುತ್ತಿದ್ದಾರೆ" ಎಂದಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ತಿರುಗೇಟು ನೀಡಿದ ಸಚಿವರು, "ಎಚ್.ಡಿ. ಕುಮಾರಸ್ವಾಮಿ ಅವರಿಗೆ ಡಿ.ಕೆ.ಶಿವಕುಮಾರ್ ಹಾಗೂ ನನ್ನನ್ನು ಕಂಡರೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಶಿವಲಿಂಗೇಗೌಡರನ್ನು ಕಂಡರೆ ಇನ್ನೂ ಆಗುತ್ತಿಲ್ಲ. ಅವರ ಪಕ್ಷದಲ್ಲೇ ಉಳಿದುಕೊಂಡಿದ್ದರೆ ಬೋರ್ಡ್ ಅಧ್ಯಕ್ಷರನ್ನಾಗಿಯೂ ಯಾರನ್ನೂ ಮಾಡುತ್ತಿರಲಿಲ್ಲ. ರಾಮನಗರದ ಉಸ್ತುವಾರಿ ಸಚಿವರಾಗಿರುವ ಬಾಲಕೃಷ್ಣ, ತಮ್ಮ ವ್ಯಾಪ್ತಿಯಲ್ಲಿನ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಮಾತನಾಡುತ್ತಾರೆ. ಇದರಲ್ಲಿ ಅವರಿಗೇನು ಸಮಸ್ಯೆ? ನಾನೀಗ ಕಾಂಗ್ರೆಸ್‌ನಲ್ಲಿದ್ದೇನೆ, ನಾನೂ ಕಾಂಗ್ರೆಸಿಗ" ಎಂದರು.

ಬರ ಅಧ್ಯಯನ ಸಂಬಂಧ ಕೇಂದ್ರದ ತಂಡ ಬಂದಿದೆ. ಅವರು ಯಾವ ರೀತಿ ವರದಿ ನೀಡುತ್ತಾರೋ ನೋಡಬೇಕು. ನಮ್ಮ ರೈತರ ಪರವಾಗಿಯೇ ವರದಿ ನೀಡುತ್ತಾರೆ ಎಂಬ ವಿಶ್ವಾಸವಿದೆ. ಆದರೆ ಕೇಂದ್ರ ಸರ್ಕಾರ ಈವರೆಗೂ ನಮ್ಮ ನಿರೀಕ್ಷೆಗೆ ತಕ್ಕಂತೆ ಬರ ಪರಿಹಾರ ನೀಡಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದ ವೇಳೆಯೂ ಸಂಪೂರ್ಣ ಪ್ರ

ಹನೂರು ತಾಲೂಕಿನಲ್ಲಿ ಪ್ರಜಾ ಸೇವಾ ಆಂದೋಲನ ಯಶಸ್ವಿ

131 ಅರ್ಜಿ, ಸ್ಥಳದಲ್ಲೇ ಹಲವು ಸಮಸ್ಯೆಗಳಿಗೆ ಪರಿಹಾರ

ಹನೂರು: ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ಪುಟ್ಟರಂಗಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಹನೂರು ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಒಟ್ಟು 131 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಚಿವ ಪುಟ್ಟರಂಗ ಶೆಟ್ಟಿ ಅವರು, ರಾಜ್ಯ ಸರ್ಕಾರವು ಆಡಳಿತವನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಪ್ರಜಾ ಸೇವಾ ಇಲಾಖೆಯನ್ನು ರಚನೆ ಮಾಡಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಲು ಈ ವೇದಿಕೆ ಸಹಕಾರಿಯಾಗಿದೆ. ಸರ್ಕಾರದ ಮುಖ್ಯ ಉದ್ದೇಶವೇ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ಎಂದು ತಿಳಿಸಿದರು.

ಸಾರ್ವಜನಿಕರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಪ್ರತಿ ತಾಲೂಕು ಮಟ್ಟದಲ್ಲಿ ಈ ಆಂದೋಲನವನ್ನು ನಡೆಸಲಾಗುತ್ತಿದೆ. ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಅಧಿಕಾರಿಗಳು ಸ್ವೀಕರಿಸಿದ ಅರ್ಜಿಗಳನ್ನು ಗಂಭೀರವಾಗಿ ಪರಿಗಣಿಸಿ, ನಿಯಮಾನುಸಾರ ಯಾವುದೇ ವಿಳಂಬವಿಲ್ಲದೆ ವಿಲೇವಾರಿ ಮಾಡಬೇಕು. ಸಾರ್ವಜನಿಕರಿಗೆ ಅನಗತ್ಯವಾಗಿ ತೊಂದರೆ ಕೊಡುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಂದಾಯ, ಪುರಸಭೆ, ಅರಣ್ಯ ಇಲಾಖೆ ಸಮಸ್ಯೆಗಳದ್ದೇ ಹೆಚ್ಚು

ಈ ಬಾರಿಯ ಪ್ರಜಾ ಸೇವಾ ಆಂದೋಲನದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇ ಹೆಚ್ಚಿನ ಸಂಖ್ಯೆಯಲ್ಲಿ ಕೇಳಿಬಂದವು. ಜಮೀನಿನ ಪಹಣಿ ತಿದ್ದುಪಡಿ, ಪೋಡಿ, ಹಕ್ಕುಪತ್ರ, ಪೌತಿ ಖಾತೆ, ಸರ್ಕಾರಿ ಜಮೀನು ಮಂಜೂರಾತಿ, ನಿವೇಶನಕ್ಕಾಗಿ ಮನವಿ ಸಲ್ಲಿಸಲಾಯಿತು. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು, ರಸ್ತೆ ದುರಸ್ತಿ, ಬೀದಿ ದೀಪ, ಸ್ವಚ್ಛತೆ, ಮನೆ ಹಕ್ಕುಪತ್ರ, ನಳ ಸಂಪರ್ಕ ಕುರಿತ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ದೂರು ನೀಡಿದರು. ಅರಣ್ಯ ಅಂಚಿನ ಗ್ರಾಮಗಳಾದ ಕಾಂಚಳ್ಳಿ, ಮಂಗಲ, ರಾಮಾಪುರ, ಬಂಡಳ್ಳಿ ಭಾಗದ ರೈತರು ಅರಣ್ಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಮುಂದಿಟ್ಟರು. ಅರಣ್ಯ ಪ್ರಾಣಿಗಳಿಂದ ಬೆಳೆ ಹಾನಿ, ಜಮೀನಿಗೆ ಪ್ರವೇಶಿಸಲು ಅಡ್ಡಿ, ಅರಣ್ಯ ಹಕ್ಕುಪತ್ರ ನೀಡುವಂತೆ ಮನವಿ ಮಾಡಿದರು. ಇದಲ್ಲದೆ ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲಚೇತನರ ಮಾಸಾಶನ, ಪಡಿತರ ಚೀಟಿ ತಿದ್ದುಪಡಿ, ವಸತಿ ಯೋಜನೆಗಳ ಬಗ್ಗೆಯೂ ಅರ್ಜಿಗಳು ಬಂದಿವೆ. ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ರವಾನಿಸಿ, 15 ದಿನಗಳೊಳಗೆ ವಿಲೇವಾರಿ ಮಾಡಿ ವರದಿ ನೀಡುವಂತೆ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಹನೂರು ಶಾಸಕ ಎಂ.ಆರ್. ಮಂಜುನಾಥ್, ತಹಶೀಲ್ದಾರ್ ಚೈತ್ರಾ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ನೂರಾರು ಸಾರ್ವಜನಿಕರು ಉಪಸ್ಥಿತರಿದ್ದರು.

ಗ್ರಾಪಂ ಮುಂಭಾಗ ಪ್ರತಿಭಟನೆ

ಗುಂಡ್ಲುಪೇಟೆ: ತಾಲೂಕಿನ ಭೀಮನಬೀಡು ಗ್ರಾಮದ 2ನೇ ವಾರ್ಡ್‌ನಲ್ಲಿ ವಾಸಿಸುವ ನಿವಾಸಿಗರು ಸಮರ್ಪಕ ರಸ್ತೆಗಾಗಿ ಭೀಮನಬೀಡು ಗ್ರಾಮಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸಿದರು.

ಸುಮಾರು 30ವರ್ಷಗಳಿಂದಲೂ ಸಮರ್ಪಕ ರಸ್ತೆ ಕಾಣದೇ ವೃದ್ದರು, ಶಾಲಾ ಮಕ್ಕಳು, ನಿವಾಸಿಗರು ಜೀವನ ನಡೆಸುವಂತಹ ಪರಿಸ್ಥಿತಿ ಎದುರಾಗಿದ್ದರೂ. ಹಲವಾರು ಬಾರಿ ಗ್ರಾಪಂ, ಜನಪ್ರತಿನಿಧಿಗಳಿಗೂ ಸಹ ಮನವಿ ಸಲ್ಲಿಸಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಧಿಕಾರಿಗಳ ವಿರುದ್ಧ ದಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರು ಪಿಡಿಒ ಅವರಿಗೆ ಗ್ರಾಮದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಜೊತೆಗೆ, ಶಾಶ್ವತ ಪರಿಹಾರ ನೀಡುವಂತೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡ ರಾಜು ಭೀಮನಬೀಡು, ಗ್ರಾಮದ ಹಲವಾರು ಮಹಿಳೆಯರು ಹಾಜರಿದ್ದರು.

ವಾಸಕ್ಕೆ ಅವಕಾಶ ಕೊಡಿಸಿಕೊಡಿ

ಮೈಸೂರು: ತಾವು ಕೊಲೆ ಮಾಡಿ ಮಗನನ್ನು ಓದಿಸಿ, ಮನೆ ಕಟ್ಟಲು ಕಷ್ಟ ಪಟ್ಟೆ, ಆದರೆ ಕಳೆದ ವರ್ಷ ಮಗ ತೀರಿಕೊಂಡ ಬಳಿಕ ಸೊಸೆ ಮನೆಯನ್ನು ಮಾರಾಟ ಮಾಡಿ ತಮ್ಮನ್ನು ಬೀದಿಗೆ ತಳ್ಳಿದ್ದಾಳೆ. ಗ್ರಾಪಂ, ಡಿಸಿ ಮೊದಲಾದ ಎಲ್ಲರಿಗೂ ಮನವಿ ಕೊಟ್ಟರೂ ಯಾರೂ ನೆರವಿಗೆ ಬಂದಿಲ್ಲ. ಅನ್ಯಾಯ ಮಾಡಿದ್ದಾರೆ. ಈಗಲಾದರೂ ನ್ಯಾಯ ದೊರಕಿಸಿ ಕೊಡದಿದ್ದರೆ ಗ್ರಾಪಂ ಅಥವಾ ಡಿಸಿ ಕಚೇರಿ ಬಳಿ ಪ್ರಾಣ ತ್ಯಾಗ ಮಾಡುವೆ ಎಂದು ಹಿನಕಲ್ ನಿವಾಸಿ 75 ವರ್ಷ ವಯಸ್ಸಿನ ರತ್ನಮ್ಮ ಕಂಬನಿಗರೆದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತಮ್ಮ ಓರ್ವ ಪುತ್ರ ಕಳೆದ ವರ್ಷದ ಜನವರಿಯಲ್ಲಿ ಅನಾರೋಗ್ಯ ಕಾರಣ ಕೊನೆಯುಸಿರೆಳೆದ. ಇದಕ್ಕೂ ಮೊದಲು 2015 ರಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಳ್ಳಿ ಗ್ರಾಮದಲ್ಲಿದ್ದ ಒಂದು ಹಳೆಯ ಮನೆಯನ್ನು ಮಾರಾಟ ಮಾಡಿ, ಮಗನಿಗೆ ನೀಡಿದ ಹಣದಲ್ಲಿ ನಗರದ ಹೂಟಗಳ್ಳಿ ವ್ಯಾಪ್ತಿಯಲ್ಲಿ ಒಂದು ನಿವೇಶನ ಖರೀದಿಸಿ, ಅದರಲ್ಲಿ ಮನೆ ಕಟ್ಟಿ ತಾವೆಲ್ಲರೂ ವಾಸವಾಗಿದ್ದೆವು. ಆದರೆ ಪುತ್ರ ಸಾವನ್ನಪ್ಪಿದ ಬಳಿಕ ಸೊಸೆ ತಮ್ಮನ್ನು ಹೊರ ಹಾಕಿದ್ದಲ್ಲದೆ, ಅಕ್ರಮವಾಗಿ ಗ್ರಾಪಂ, ಹೂಟಗಳ್ಳಿ ನಗರಸಭೆ ಅಧಿಕಾರಿಗಳ ನೆರವಿನಿಂದ ಅಕ್ರಮವಾಗಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು 75 ಲಕ್ಷಕ್ಕೆ ಮಾರಾಟ ಮಾಡಿ ತಮ್ಮನ್ನು ಅತಂತ್ರಳನ್ನಾಗಿಸಿದ್ದಾಳೆಂದು ಆರೋಪಿಸಿದರು.

ಈ ಕುರಿತು ಸ್ಥಳೀಯ ಠಾಣೆಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ತಮಗೆ ವಾಸಕ್ಕೆ ಅವಕಾಶ ನೀಡಬೇಕೆಂದು ಉಪ ವಿಭಾಗಾಧಿಕಾರಿ ಮಾಡಿದ ಆದೇಶವನ್ನು ಜಿಲ್ಲಾಧಿಕಾರಿ ನ್ಯಾಯಾಲಯ ವಜಾಗೊಳಿಸಿ, ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿರೆಂದು ಆದೇಶಿಸಿದ್ದಾರೆ.

ತಾವೀಗ ಯಾರದೋ ಮನೆ ಜಗಲಿ, ಯಾರು ಯಾರೋ ನೀಡಿದ ಊಟಗಳಿಂದ ಜೀವಿಸುತ್ತಿದ್ದು, ಸಂಬಂಧಿಸಿದವರು ನ್ಯಾಯ ದೊರಕಿಸಿಕೊಡದಿದ್ದರೆ ಗ್ರಾಪಂ, ತಾಪಂ ಅಥವಾ ಡಿಸಿ ಕಚೇರಿ ಬಳಿ ಪ್ರಾಣ ಬಿಡುವೆ, ಎಂದು ಕಂಬನಿಗರೆದರು.

ಇಂದು ಅಧ್ಯಕ್ಷರ ಪದಗ್ರಹಣ ಸಮಾರಂಭ

ಮೈಸೂರು: ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷರಾಗಿ ನೇಮಕವಾಗಿರುವ ಬೀರಿಹುಂಡಿ ಬಸವಣ್ಣ ಅವರ ಪದಗ್ರಹಣ ಕಾರ್ಯಕ್ರಮವನ್ನು ಅ.4ರಂದು ಬೆಳಿಗ್ಗೆ 11ಕ್ಕೆ ನಗರದ ರಿಂಗ್ ರಸ್ತೆಯಲ್ಲಿರುವ ಭಾನವಿ ಪ್ಯಾಲೇಸ್‌ನಲ್ಲಿ ಏರ್ಪಡಿಸಲಾಗಿದೆ.

ಈ ಕುರಿತು ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೀರಿಹುಂಡಿ ಬಸವಣ್ಣ, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವರಿಷ್ಠರು ನನ್ನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಈ ಪದಗ್ರಹಣ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಸಂಸದ ಸುನಿಲ್ ಬೋಸ್, ಮಾಜಿ ಸಚಿವ ವೆಂಕಟೇಶ್, ಶಾಸಕರಾದ ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು ಸೇರಿದಂತೆ ಕಾಂಗ್ರೆಸ್‌ನ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಮೈಸೂರು ಜಿಲ್ಲಾದ್ಯಂತ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬೂತ್ ಕಮಿಟಿಗಳನ್ನು ರಚಿಸಿ, ಯುವಕರು, ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಪಕ್ಷವನ್ನು ಮತ್ತಷ್ಟು ಬಲಪಡಿಸುತ್ತೇನೆ. ಪಂಚ ಗ್ಯಾರಂಟಿ ಯೋಜನೆಗಳ ಲಾಭವನ್ನು ಗ್ರಾಮೀಣ ಮಟ್ಟದ ಕೊನೆಯ ವ್ಯಕ್ತಿಗೂ ಸರಿಯಾಗಿ ತಲುಪುತ್ತಿದೆಯೇ ಎಂಬುದನ್ನು ಖಾತರಿಪಡಿಸಲು ನಮ್ಮ ಕಾರ್ಯಕರ್ತರ ಪಡೆ ಕೆಲಸ ಮಾಡಲಿದೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಜಿಲ್ಲಾದ್ಯಂತ ಅಭೂತಪೂರ್ವವಾಗಿ ಗೆಲ್ಲಿಸುವುದು ನಮ್ಮ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷದ ಸಿದ್ದರಾಜು, ಗುರುಸ್ವಾಮಿ, ಮಹಾದೇವ, ಸಾಗರ್, ಡಾ.ಎನ್.ನಾಗರಾಜ್ ಸೇರಿದಂತೆ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಅಹಿಂಸೆಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ

ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿ ನರಸಿಂಹ ಮೂರ್ತಿ ಅಭಿಪ್ರಾಯ । ಗಾಂಧಿ ಜಯಂತಿ

ರಾಮನಗರ: ಅಹಿಂಸೆಯ ಮೂಲಕ ಸ್ವಾತಂತ್ರ್ಯ ಪಡೆದುಕೊಂಡ ದೇಶ ಭಾರತ. ಇದಕ್ಕೆ ಕಾರಣರಾಗಿದ್ದು ಮಹಾತ್ಮ ಗಾಂಧೀಜಿ ಅವರು. ಗಾಂಧೀಜಿ ಎನ್ನುವುದು ಬರಿ ಹೆಸರಲ್ಲ ಅದೊಂದು ಶಕ್ತಿ. ಅವರು ಭಾರತ ದೇಶಕ್ಕೆ ಮಾತ್ರವಲ್ಲ ಇಡೀ ಮನುಕುಲಕ್ಕೆ ಆದರ್ಶ ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕಾರಿ ನರಸಿಂಹ ಮೂರ್ತಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಸರ್ಕಾರಿ ಕಚೇರಿಗಳ ಸಂಕೀರ್ಣದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 157ನೇ ಜಯಂತಿ ಹಾಗೂ ಮಾಜಿ ಪ್ರಧಾನಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 122ನೇ ಜಯಂತಿಯ ವೇಳೆ ಅವರು ಮಾತನಾಡಿದರು. ಗಾಂಧೀಜಿ ಹುಟ್ಟಿದ ನೆಲದಲ್ಲಿ ಜನಿಸಿರುವ ನಾವೆಲ್ಲರೂ ಭಾಗ್ಯವಂತರು ಎಂದರು.

ಶ್ರೇಷ್ಠ ವ್ಯಕ್ತಿ ಮಹಾತ್ಮ ಗಾಂಧಿ: ಯು.ಎಂ.ರವಿ

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಇತಿಹಾಸಕಾರ ಡಾ. ಯು.ಎಂ. ರವಿ ಅವರು ಮಾತನಾಡಿ, ಸರಳವಾಗಿ ಬದುಕಿ ಈ ದೇಶಕ್ಕೆ ವಿಶೇಷವಾದ ಸ್ವಾತಂತ್ರ್ಯ ಎಂಬ ಕಾಣಿಕೆ ನೀಡಿದ ಶ್ರೇಷ್ಠ ವ್ಯಕ್ತಿಯೇ ಮಹಾತ್ಮ ಗಾಂಧೀಜಿ ಎಂದರು.

ನನ್ನ ಜೀವನವೇ ನನ್ನ ಸಂದೇಶ ಎಂಬುದನ್ನು ಸಾರಿದ ಮಹತ್ಮಾರ ಜನ್ಮ ಜಯಂತಿಯನ್ನು ವಿಶ್ವಸಂಸ್ಥೆಯೂ ಸೇರಿದಂತೆ ಪ್ರಪಂಚದ 213 ದೇಶದಲ್ಲಿ ಅಹಿಂಸಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದು ಗಾಂಧೀಜಿಯವರ ವ್ಯಕ್ತಿತ್ವದ ವಿಶೇಷ.

ಸತ್ಯಾಗ್ರಹ, ಅಹಿಂಸೆ ಹಾಗೂ ಅಸಹಕಾರ ಚಳುವಳಿ ಎಂಬ ಮೂರು ಅಸ್ತ್ರಗಳನ್ನು ದೇಶದ ಸ್ವಾತಂತ್ರ್ಯದ ಹೋರಾಟಕ್ಕೆ ಬಳಸಿದರು. ವಿಶ್ವದ ಇತರ ಭಾಗಗಳಲ್ಲಿ ಹಿಂಸೆಯ ಮೂಲಕ ಸ್ವಾತಂತ್ರ್ಯದ ಹೋರಾಟ ನಡೆದರೆ. ಭಾರತದಲ್ಲಿ ಗಾಂಧಿಜೀಯವರ ನೇತೃತ್ವದಲ್ಲಿ ಅಹಿಂಸೆಯೇ ಮುಖ್ಯ ಅಸ್ತ್ರವಾಯಿತು. ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ ಮೇಲೆ ಗೋಪಾಲ ಕೃಷ್ಣ ಗೋಖಲೆ ಅವರನ್ನು ಗುರುವಾಗಿ ಸ್ವೀಕರಿಸಿ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದರು. ಆ ಸಂದರ್ಭದಲ್ಲಿ ದೇಶದಲ್ಲಿ ಮಂದಗಾಮಿ ಹಾಗೂ ತೀವ್ರಗಾಮಿಗಳು ಎಂಬ ಎರಡು ಗುಂಪುಗಳಿದ್ದವು. 1901ರಲ್ಲಿ ಕಲ್ಕತ್ತದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ತಾವು ಉಳಿದುಕೊಂಡ ಮನೆಯನ್ನು ಸ್ವತಃ ತಾವೇ ಸ್ವಚ್ಛಗೊಳಿಸುವ ಮೂಲಕ ಅಲ್ಲಿಂದಲೇ ಭಾರತವನ್ನು ಸ್ವಚ್ಛಗೊಳಿಸಲು ಪ್ರಾರಂಭಿಸುತ್ತಾರೆ. ಭಾರತವು ಸ್ವಚ್ಛ ಹಾಗೂ ಸುಧಾರಣೆಯಾಗಬೇಕಾದರೆ ಅದು ಮೊದಲು ನನ್ನಿಂದಲೇ ಆಗಬೇಕು ಎಂಬ ಧೋರಣೆ. ಗಾಂಧೀಜಿ ತತ್ವವೇ ತಾವು ಏನು ಹೇಳಿದ್ದಾರೆ ಅದನ್ನೇ ಮಾಡುವುದಾಗಿತ್ತು. ನಿಜವಾದ ದೇಶದ ಸ್ವಚ್ಛತೆ ಮನಸ್ಸಿನ ಸ್ವಚ್ಛತೆಯಾಗಿರಬೇಕು. ನಮ್ಮ ಮನೆಯ ಸ್ವಚ್ಛತೆಯಾಗಿರಬೇಕು. ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಿದರೆ ದೇಶ ಸ್ವಚ್ಛವಾಗಿರುತ್ತದೆ ಎಂದು ಗಾಂಧೀಜಿ ನಂಬಿದ್ದರು ಎಂದರು.

ಮಾತೃ ಭಾಷೆಗೆ ಪ್ರಾಮುಖ್ಯತೆ ಕೊಡಬೇಕು. ಧೂಮಪಾನ, ಮದ್ಯಪಾನ ಜೀವಕ್ಕೆ ಹಾನಿಕಾರ ಅದನ್ನ ತ್ಯಜಿಸಬೇಕು, ಮನೆಯ ಸುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಹಾಗೂ ಆ ಸ್ವಚ್ಛತೆ ನಮ್ಮಿಂದಲೇ ಆರಂಭವಾಗಬೇಕು ಎಂಬುದು ಗಾಂಧಿ ತತ್ವವಾಗಿತ್ತು ಎಂದು ಗಾಂಧೀಜಿ ಬದುಕು, ಹೋರಾಟಗಳ ಬಗ್ಗೆ ತಿಳಿಸಿಕೊಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ರವಿರಾಜ್ ಎಚ್.ಜಿ ಅವರು ಸ್ವಾಗತಿಸಿದರು. ಖ್ಯಾತ ಸುಗಮ ಸಂಗೀತಗಾರರಾದ ರಮಣೀ ಮತ್ತು ತಂಡದವರು ಗಾಂಧೀಜಿಯವರ ಪ್ರಿಯ ಭಜನೆಗಳನ್ನು ಪ್ರಸ್ತುತಪಡಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮೇಜರ್ ಡಾ. ಲಕ್ಷ್ಮೀ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಕಲಾವಿದರಾದ ಶ್ರೀನಿವಾಸ್ ಅವರು ಕಾರ್ಯಕ್ರಮ ನಿರೂಪಿಸಿದರು. ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಅಧಿಕಾರಿ ಬೋರೇಗೌಡ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜ್ಯೋತಿ, ಎನ್.ಎಸ್.ಎಸ್. ಅಧಿಕಾರಿ ಡಾ. ರಾಜಣ್ಣ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಹೇಮಾವತಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಎನ್.ಸಿ.ಸಿ. ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು. ದಿವಂಗತ ನಾದ ಶ್ರೀ ಬಿ.ಎಸ್. ನಾರಾಯಣ ಅಯ್ಯಂಗಾರ್ ರವರ ಮಕ್ಕಳಾದ ವಿದ್ವಾನ್ ಎಸ್.ಎನ್. ರಂಗರಾಜು, ವಿದೂಷ ಎಸ್. ಎನ್. ಜಯಲಕ್ಷ್ಮೀ, ವಿದ್ವಾನ್ ಎಸ್.ಎನ್. ಶ್ರೀನಿವಾಸ ಪ್ರಸನ್ನ, ಜಗದೀಶ್ ಮೂರ್ತಿ ಹಾಗೂ ಜಯರಾಮು ಅವರು ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಶ್ರಮದಾನ ಮಾಡಿದರು.

ಸಾಲ ಮಾಡಿ ಕಾರು ಖರೀದಿಸಿದ್ದ ಶಾಸ್ತ್ರೀಜಿ

**ಆಡಳಿತದಲ್ಲಿ ಆದರ್ಶಪ್ರಾಯವಾಗಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರನ್ನು ಕಾಣಲಾಗುತ್ತದೆ. ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನ ಮಂತ್ರಿಯಾಗಿದ್ದರೂ ಸಹ ಸಾಲ ಮಾಡಿ ಕಾರು ಖರೀದಿಸಿದ್ದರು.

ಎಆರ್‌ಕೆ, ಮುಸ್ಲಿಂ ಸಮುದಾಯದ ನಡುವೆ ವೈಮನಸ್ಸಿಲ್ಲ

ಶಾದಿಮಹಲ್ ಹೆಚ್ಚುವರಿಯಾಗಿ 1 ಕೋಟಿ ರೂ. ಸಿಎಂ, ಎಆರ್‌ಕೆಗೆ ಅಭಿನಂದನೆ

ಚಾಮರಾಜನಗರ: ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಮುಸ್ಲಿಂ ಸಮುದಾಯ ನಡುವೆ ಯಾವುದೇ ವೈಮನಸ್ಸು ಇಲ್ಲ. ಅವರಿಗೆ ಸಂಪೂರ್ಣ ಸಹಕಾರ ಕೊಡುವುದಾಗಿ ಅಂಜುಮನ್ ಇಸ್ಲಾಮಿಯ ಸಂಸ್ಥೆ ಅಧ್ಯಕ್ಷ ಹಬೀಪಾಷ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಕೊಳ್ಳೇಗಾಲದಲ್ಲಿ ಶಾದಿಮಹಲ್ ನಿರ್ಮಾಣಕ್ಕೆ 1ಕೋಟಿ ರೂ. ಮಂಜೂರು ಮಾಡಿದರು. ಅದರಲ್ಲಿ 50 ಲಕ್ಷ ರೂ. ಬಿಡುಗಡೆಯಾಗಿತು. ಇನ್ನೂ ಉಳಿದ 50 ಲಕ್ಷ ಬಿಡುಗಡೆಗೆ ವಿಳಂಬವಾದಕ್ಕೆ ಶಾಸಕರು, ಅಂಜುಮನ್ ಸಂಸ್ಥೆ, ಮುಸ್ಲಿಂ ಸಮುದಾಯದವರ ನಡುವೆ ಸ್ವಲ್ಪ ಭಿನ್ನಾಭಿಪ್ರಾಯ ಉಂಟಾಗಿತು. ಸಮುದಾಯದ ಮುಖಂಡರು, ಶಾಸಕರು ಮಾತುಕತೆ ನಡೆಸಿದಾಗ ನನ್ನ ಅವಧಿಯಲ್ಲಿ ಶಾದಿಮಹಲ್ ಪೂರ್ಣಗೊಳಿಸಿಕೊಡುವುದಾಗಿ ಶಾಸಕರು ಭರವಸೆ ನೀಡಿದ್ದು ಅಲ್ಲದೆ ಶಾದಿಮಹಲ್‌ಗೆ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರನ್ನು ಕರೆದುಕೊಂಡು ಬಂದು ಪರಿಶೀಲಿಸಿ ಹೆಚ್ಚು ವರಿಯಾಗಿ 1 ಕೋಟಿ ಅನುದಾನ ಕೊಡುವುದಾಗಿ ಘೋಷಣೆ ಮಾಡಿಸಿದ್ದಾರೆ. ಇದು ಸಮುದಾಯದಲ್ಲಿ ಸಂತಸ ಉಂಟು ಮಾಡಿದೆ. ಸಮುದಾಯದವರೆಲ್ಲ ಒಗ್ಗಟ್ಟಿನಿಂದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರ ಶಕ್ತಿ ಬಲಪಡಿಸಿ ಸಂಪೂರ್ಣ ಸಹಕಾರ ನೀಡಿ ಅವರನ್ನು ಬೆಂಬಲಿಸುವುದಾಗಿ ಹೇಳಿದರು.

ಸಿಎಂ, ಎಆರ್‌ಕೆಗೆ ಅಭಿನಂದನೆ

ಶಾದಿಮಹಲ್‌ಗೆ ಹೆಚ್ಚುವರಿಯಾಗಿ 1 ಕೋಟಿ ರೂ. ಅನುದಾನ ಘೋಷಣೆ ಮಾಡಿದ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್, ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರಿಗೆ ಮುಸ್ಲಿಂ ಸಮುದಾಯದ ಪರವಾಗಿ ಈ ಮೂಲಕ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಂಜುಮನ್ ಇಸ್ಲಾಮಿಯಾ ಸಂಸ್ಥೆ ಖಜಾಂಚಿ ಜಬಿವುಲ್ಲಾ, ನಿರ್ದೇಶಕ ಸಾಧಿಕ್ ಪಾಷ, ಸದಸ್ಯ ವಸೀಂಪಾಷ, ಮಹಮದ್ ಅತಿಕ್ ಪಾಷ, ಗ್ರಾ.ಪಂ.ಮಾಜಿ ಸದಸ್ಯ ಮುಜು ಮಾಂಬಳ್ಳಿ, ನಗರಸಭಾ ಮಾಜಿ ಸದಸ್ಯ ಅನ್ಸರ್ ಬೇಗ್, ಅಲ್ಪಸಂಖ್ಯಾತ ವಿಭಾಗ ಬ್ಲಾಕ್ ಅಧ್ಯಕ್ಷ ಮನ್ಸೂರ್ ಪಾಷ ಹಾಜರಿದ್ದರು.

ಗುಂಡ್ಲುಪೇಟೆ ರಸ್ತೆ ಅಭಿವೃದ್ಧಿ ಒತ್ತು

ಚಾಮರಾಜನಗರ : ಗುಂಡ್ಲುಪೇಟೆ ಕ್ಷೇತ್ರದ ರಸ್ತೆ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದು ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ಹರವೆ ಗ್ರಾಮದಲ್ಲಿ ಬದನವಾಳು ರಾಷ್ಟ್ರೀಯ ಹೆದ್ದಾರಿ 150ರಿಂದ ವೀರನಪುರ ಗೇಟ್ (ಎಸ್‌ಹೆಚ್ 81)ನ್ನು ಸಂಪರ್ಕಿಸುವ (ರಾಜ್ಯ ಹೆದ್ದಾರಿ 301) ರಸ್ತೆ ಮಾರ್ಗ ಬಸವಟ್ಟಿ–ಹೆಮ್ಮರಗಾಲ–ಕೆಬ್ಬೇಪುರ–ಕುಲಗಾಣ ರಸ್ತೆನ.23.30 ನಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು. ಬದನವಾಳು ರಾಷ್ಟ್ರೀಯ ಹೆದ್ದಾರಿ 150ರಿಂದ ವೀರನಪುರ ಗೇಟ್ (ಎಸ್‌ಹೆಚ್ 81)ನ್ನು ಸಂಪರ್ಕಿಸುವ (ರಾಜ್ಯ ಹೆದ್ದಾರಿ 301) ರಸ್ತೆ ಮಾರ್ಗ ಬಸವಟ್ಟಿ–ಹೆಮ್ಮರಗಾಲ–ಕೆಬ್ಬೇಪುರ–ಕುಲಗಾಣ–ಮಲೆಯೂರು–ಹರವೆ–ನಂಜೇದೇವನಪುರ ರಸ್ತೆ ಸ.23.30 ನಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಲೆಕ್ಕಶೀರ್ಷಿಕೆ 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ 3 ಕೋಟಿ ಬಿಡುಗಡೆಯಾಗಿದೆ. ಇಂದು ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದ್ದು, ಒಂದು ಉತ್ತಮ ರಸ್ತೆ, ಸೇತುವೆ ಇದಾಗಿದ್ದು, ಈ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದರು. ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಕೆರೆಹಳ್ಳಿನವೀನ್, ತಾ.ಪಂ.ಮಾಜಿ ಸದಸ್ಯ ಉದಯಕು ಮಾರ್, ಎಇಇ ಶಾಂತಮ್ಮ, ಸಹಾಯಕ ಇಂಜಿನಿಯರ್ ರಾದ ರೇವಣ್ಣ, ಕೃಷ್ಣಮೂರ್ತಿ,ಗುತ್ತಿಗೆದಾರ ಸಂತೋಷ ಕುಮಾರ್, ಬೆಳ್ಳೇಗೌಡ, ಕೆರೆಹಳ್ಳಿ ರೇವಣ್ಣ, ಗುರುಸಿದ್ದೇಗೌಡ, ಮಲೆಯೂರು ನಾಗರಾಜು, ಹರವೆ ರಂಗಸ್ವಾಮಿನಾಯಕ, ರೇವಪ್ಪ, ನಾಗೇಶ್, ಅರಳಿಕಟ್ಟೆ ಬಸಪ್ಪ, ಪ್ರವೀಣ, ಮಂಜು, ಮಹದೇವಸ್ವಾಮಿ, ಹರೀಶ್ ಕೆಬ್ಬೇಪುರ ಇತರಿದ್ದರು

ಬರ: ವ್ಯಾಪ್ತಿ ಮೀರಿದ ಸಮಸ್ಯೆ ಗಮನಕ್ಕೆ ತನ್ನಿ

ಸಚಿವ ಬಾಲಕೃಷ್ಣ ಅಭಿಮತ । ಪರಿಸ್ಥಿತಿ ಸಮರ್ಪಕವಾಗಿ ನಿಭಾಯಿಸಲು ನೋಡಲ್ ಅಧಿಕಾರಗಳ ನಿಯೋಜನೆ

ರಾಮನಗರ: ಜಿಲ್ಲೆಯಲ್ಲಿ ಐದೂ ತಾಲ್ಲೂಕುಗಳು ಬರ ಪೀಡಿತ ಎಂದು ಸರ್ಕಾರ ಘೋಷಿಸಿದೆ. ಬರಪರಿಸ್ಥಿತಿ ಅವಲೋಕಿಸಲು ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ. ಪ್ರತಿ ಶುಕ್ರವಾರ ನೋಡಲ್ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯ ಕ್ಷೇತ್ರಗಳಿಗೆ ಭೇಟಿ ಕೊಟ್ಟು ಬರ ಪರಿಸ್ಥಿತಿಯನ್ನು ಸಮಪರ್ತಕವಾಗಿ ನಿಭಾಯಿಸ ಬೇಕು ಎಂದು ಜಿಲ್ಲಾ ಪ್ರಕೃತಿ ವಿಕೋಪ ಮೇಲಸ್ತುವಾರಿ ಸಚಿವರೂ ಆಗಿರುವ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ಕೊಟ್ಟರು.

ಶನಿವಾರ ನಗರದ ಜಿಲ್ಲಾ ಸರ್ಕಾರಿ ಕಚೇರಿಗಳ ಸಂಕೀರ್ಣದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಪತ್ತು ನಿರ್ವಹಣೆ ವಿಷಯಗಳ ಕುರಿತಂತೆ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಿಯೋಜಿತ ಅಧಿಕಾರಿಗಳು ಕೈಗೊಳ್ಳಲಾಗುತ್ತಿರುವ ಕ್ರಮಗಳು ಹಾಗೂ ಪರಿಹಾರ ಕ್ರಮಗಳನ್ನು ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಸಭೆ ನಡೆಸಿ ಕೂಲಂಕುಷವಾಗಿ ಪರಿಶೀಲಿಸಿ ಅದನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತಂದ ನಂತರ ತಮಗೆ ವರದಿ ನೀಡುವಂತೆ ಅವರು ತಿಳಿಸಿದರು.

ಅಧಿಕಾರಿಗಳ ಹಂತದಲ್ಲಿಯೇ ಬಗೆಹರಿಸಬಹುದಾದ ಕೆಲವೊಂದು ಸಮಸ್ಯೆಗಳನ್ನು ಬಗೆಹರಿಸಿ, ಅವರ ವ್ಯಾಪ್ತಿಯಲ್ಲಿ ಆಗದಿದ್ದ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತಂದರೆ ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಬೆಳೆ ವಿಮೆ ಬಗ್ಗೆ ಸೂಚನೆ

ಬರಗಾಲದ ಸಂದರ್ಭದಲ್ಲಿ ಬೆಳೆ ವಿಮೆ ಅತ್ಯಂತ ಉಪಯುಕ್ತ ಕ್ರಮವಾಗಿದ್ದು, ರೈತರು ತಮ್ಮ ಬೆಳೆಗಳಿಗೆ ಮಾಡಿಸಿದ ವಿಮಾ ಪರಿಹಾರ ಹಣವನ್ನು ಸಕಾಲದಲ್ಲಿ ಪಡೆಯುವಂತಾಗಬೇಕು. ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಜಿಲ್ಲೆಯಲ್ಲಿ 18,000ಕ್ಕೂ ಹೆಚ್ಚು ರೈತರು ಈ ಬಾರಿ ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದು, ಅವರಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂದರೆ 9,000ಕ್ಕೂ ಹೆಚ್ಚು ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದಾರೆ. ಬರಗಾಲದ ಸಂದರ್ಭದಲ್ಲಿ ಬೆಳೆ ಹಾನಿಯಾದಾಗ ರೈತರಿಗೆ ಪರಿಹಾರದ ಮೊತ್ತ ಸಕಾಲದಲ್ಲಿ ಪಾವತಿಯಾದರೆ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೈತರು ಬೆಳೆ ವಿಮೆಗೆ ನೋಂದಾಯಿತರಾಗುತ್ತಾರೆ. ಆ ಮೂಲಕ ರೈತರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಿದರೆ ಬೆಳೆಮಿಮೆ ಪಾವತಿಸುವ ರೈತರ ಸಂಖ್ಯೆಯು ಹೆಚ್ಚಾಗುತ್ತದೆ. ಇದರಲ್ಲೇನಾದರೂ ಸಮಸ್ಯೆ ಕಂಡು ಬಂದರೆ ಸಚಿವ ಸಂಪುಟ ಸಭೆ, ಕೃಷಿ ಇಲಾಖೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಸಮಸ್ಯೆಗೆ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಅಂಬಿಕಾ ಅವರು ಮಾತನಾಡಿ, ಜಿಲ್ಲೆಯಲ್ಲಿ 632.8 ಎಂ.ಎಂ ವಾಡಿಕೆ ಮಳೆಯಿದ್ದು, ಈ ಬಾರಿ ಕಡಿಮೆ ಮಳೆಯಾದ ಕಾರಣ ಸಾಕಷ್ಟು ಬೆಳೆ ಹಾನಿಯಾಗಿದೆ. 500 ಕೋಟಿಗಳ ರೂ.ಗಳಷ್ಟು ಬೆಳೆ ಹಾನಿಯಾಗಿದೆ ಎಂದು ವರದಿ ಸಲ್ಲಿಸಲಾಗಿದೆ ಎಂದರು.

ತೋಟಗಾರಿಕೆ ಬೆಳೆಯಲ್ಲಿ ಜಿಲ್ಲೆಯಲ್ಲಿ 25–26ನೇ ಸಾಲಿನಲ್ಲಿ 11,964 ರೈತರು ಸುಮಾರು 25 ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದರು. ಅವರಿಗೆ ಇದೇ ಅಕ್ಟೋಬರ್ 2 ಅಥವಾ 3ನೇ ವಾರದಲ್ಲಿ ಪರಿಹಾರ ಮೊತ್ತ ಪಾವತಿಯಾಗಲಿದ್ದು, ಅಂದಾಜು 25 ಕೋಟಿ ರೂ.ಗಳಷ್ಟು ಪರಿಹಾರ ಮೊತ್ತ ದೊರೆಯಲಿದೆ. 26–27ನೇ ಸಾಲಿಗೆ 15,000ಕ್ಕೂ ಹೆಚ್ಚು ರೈತರು 25 ಸಾವಿರಕ್ಕೂ ಹೆಕ್ಟರ್ ಪ್ರದೇಶದಲ್ಲಿ ಬೆಳೆ ವಿಮೆ ಮಾಡಿಸಿದ್ದು, ಅವರ ವಿಮಾ ಅವಧಿ ಪ್ರಾರಂಭಗೊಂಡಿದ್ದು, ಮುಂದಿನ ಆಗಸ್ಟ್ 31ರ ವರೆಗೂ ಈ ಅವಧಿಯಿದ್ದು, ಮಳೆ ಹೆಚ್ಚು ಅಥವಾ ಕಡಿಮೆಯಾಗುವುದು ಅಥವಾ ನೈಸರ್ಗಿಕ ವೈಪರಿತ್ಯದಿಂದ ಬೆಳೆ ಹಾನಿಗೀಡಾದರೆ ಹವಾಮಾನ ಮಾಹಿತಿ ಆಧಾರದ ಮೇಲೆ ಪರಿಹಾರ ಮೊತ್ತ ಪಾವತಿಯಾಗಲಿವೆ. ಜಿಲ್ಲೆಗೆ ಮಾವು ಬೆಳೆಗೆ ಮಾತ್ರ ಈ ಅವಕಾಶ ಕಲ್ಪಿಸಲಾಗಿದ್ದು ಮುಂಬರುವ ದಿನಗಳಲ್ಲಿ ಅಡಿಕೆ ಮತ್ತು ತೆಂಗು ಬೆಳೆಗಳನ್ನು ಸೇರಿಸಿಕೊಳ್ಳಬೇಕು ಎಂಬ ಪ್ರಯತ್ನ ನಡೆಯುತ್ತಿದೆ ಎಂದು ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ್ ಡಿ. ಅವರು ತಿಳಿಸಿದರು. ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ.ರಾಜು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ನಗರ, ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಗ್ಗೆಯೂ ಗಮನ ಇರಲಿ

ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ಯಾವುದೇ ರೀತಿಯ ಸಮಸ್ಯೆ ಆಗದಂತೆ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ವಹಿಸಬೇಕು. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ 36 ಗ್ರಾಮ ಪಂಚಾಯಿತಿಗಳ 68 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದ್ದು, 15 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ಇನ್ನು 15 ಗ್ರಾಮಗಳಲ್ಲಿ ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. 59 ಖಾಸಗಿ ಬೋರ್ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದೆ. 56 ಹಳ್ಳಿಗಳಿಗೆ ಖಾಸಗಿ ಬೋರ್ವೆಲ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಜ್ಞಾನೇಶ್ ಅವರು ಸಭೆಗೆ ಮಾಹಿತಿ ನೀಡಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜನರಿಗೆ ಎಲ್ಲಿಯೂ ಕುಡಿಯುವ ನೀರಿನ ತೊಂದರೆಯಾಗದಂತೆ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ದಿಸೆಯಲ್ಲಿ ತಾಲ್ಲೂಕು ಪಂಚಾಯತ್ ಅಧಿಕಾರಿಗಳು ಹಾಗೂ ತಹಶೀಲ್ದಾರರು, ನಗರಸಭೆ ಪೌರಾಯುಕ್ತರು, ಪುರಸಭೆ ಹಾಗೂ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿಯೇಯಿದ್ದು, ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಹಾಗೂ ಜಿಲ್ಲಾ ಕೇಂದ್ರದಲ್ಲಿ ಸಹಾಯವಾಣಿ ತೆರೆಯುವಂತೆ ಸೂಚಿಸಿದ ಸಚಿವರು ಈ ಕುರಿತು ವ್ಯಾಪಕ ಪ್ರಚಾರ ನೀಡುವಂತೆ ಹಾಗೂ ಮೇವಿಗೆ ಕೊರತೆಯಾಗದಂತೆ ಎಚ್ಚರಿಕೆ ಕ್ರಮಗಳನ್ನು ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ಮಾತನಾಡಿ, ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ 8 ಕೋಟಿ ಹಾಗೂ ತಹಶೀಲ್ದಾರರ ಖಾತೆಯಲ್ಲಿ 6.86 ಕೋಟಿ ಅನುದಾನ ಲಭ್ಯವಿದೆ ಎಂದು ಹೇಳಿದರು. ಜಿಲ್ಲೆಯ ಬರ ಪರಿಸ್ಥಿತಿಯಿಂದಾಗಿ 500 ಕೋಟಿ ರೂ.ಗಳಷ್ಟು ಬೆಳೆ ನಷ್ಟವಾಗಿರುವ ಬಗ್ಗೆ ವರದಿ ಸಲ್ಲಿಸಲಾಗಿದ್ದು, ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳ ಅನ್ವಯ ಜಿಲ್ಲೆಗೆ 52 ಕೋಟಿ ರೂ.ಗಳ ಪರಿಹಾರ ಮೊತ್ತ ಬರುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

5ರಂದು ವಿದ್ಯುತ್ ವ್ಯತ್ಯಯ.

ಮಂಡ್ಯ:– 66/11 ಕೆ.ವಿ ಕೋಲ್ಕರನದೊಡ್ಡಿ, ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್–01 ಕನ್ನಲಿ ಓಎಜ ಫೀಡರ್ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅಕ್ಟೋಬರ್ 5 ರಂದು ಬೆಳಿಗ್ಗೆ 09–00 ರಿಂದ ಸಂಜೆ 6–00 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕೋಲ್ಕರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದ ಎಫ್–01 ಕನ್ನಲಿ ಓಎಜ ಫೀಡರ್‌ನ ಪ್ರದೇಶಗಳಾದ ಕೋಲ್ಕರನದೊಡ್ಡಿ, ಸೊನಗನಹಳ್ಳಿ, ಹೆಮ್ಮಿಗೆ, ಭೂತನಹೊಸೂರು, ಕಬ್ಬನಹಳ್ಳಿ, ಬೇಲೂರು, ಬಿ ಯರಹಳ್ಳಿ, ಕಾಗೇಹಳ್ಳದ ದೊಡ್ಡಿ, ಜವನೇಗೌಡನದೊಡ್ಡಿ, ಹುಚ್ಚಲಗೆರೆ ಮತ್ತು ಕನ್ನಲಿ ಹಾಗೂ ಈ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜಿಲ್ಲಾ ಚಾವಿಸನಿನಿ ಕೊತ್ತತ್ತಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಪ್ರಯುಕ್ತ ಅರಿವು ಶಿಬಿರ

ಮೈಸೂರು: ಮೈಸೂರು ದಸರಾ ಮತ್ತು ನವರಾತ್ರಿ ಉತ್ಸವದ ಅಂಗವಾಗಿ ಕಳರಿ ಅರಿವು ಕಳರಿಪಯಟ್ಟಿನಲ್ಲಿ ಪರಿಚಯಾತ್ಮಕ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ ಎಂದು ತರಬೇತುದಾರ ಹಾಗೂ ಕಳರಿ ಸಾಧನಾ ಮೈಸೂರು ಸಂಸ್ಥಾಪಕ ಜಿ. ವರುಣ್ ಯಾದವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಉಚಿತ ಶಿಬಿರವನ್ನು ನಗರದ ಕಲಾಮಂದಿರದ ಆವರಣದಲ್ಲಿ ಅ.12ರಿಂದ 20ವರೆಗೆ 9 ದಿನಗಳ ಕಾಲ ಪ್ರತಿದಿನ ಬೆಳಿಗ್ಗೆ 6ರಿಂದ 7.30ವರೆಗೆ ನಡೆಸಲಾಗುತ್ತದೆ. ಗರಿಷ್ಠ 20 ಮಂದಿ ಮೊದಲು ನೋಂದಾಯಿಸುವವರಿಗೆ ಆದ್ಯತೆ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತು ನೋಂದಣಿಗಾಗಿ ಕಾರ್ಯಕ್ರಮದ ಸಂಯೋಜಕ ರಾಜೇಂದ್ರ ಚಿಕ್ಕಮರಳಿ 8050917187 ಅಥವಾ 9886750859 ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

ಮೂವರು ಹಿರಿಯ ಎಂಜಿನಿಯರ್‌ಗಳಿಗೆ ಸನ್ಮಾನ

ಮೈಸೂರು: ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ಸ್ ಅಂತರಾಷ್ಟ್ರೀಯ ಸಂಸ್ಥೆ, ಜೆಎಲ್ ಸುಮುದ ಟ್ರಸ್ಟ್ ಹಾಗೂ ಸಕಲಕಲ ಸಿರಿ ವಿದ್ಯಾಪೀಠ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಅಭಿಯಂತರರ ದಿನಾಚರಣೆ ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಮೂವರು ಹಿರಿಯ ಎಂಜಿನಿಯರ್‌ಗಳನ್ನು ಸನ್ಮಾನಿಸಲಾಯಿತು.

ವಿಶ

ಸಿನಿಮಾ ವರದಿ: ಬಿ.ಜಿ.ರವಿಕುಮಾರ್

'ತರಂಗಾಂತರಂಗ' ಚಿತ್ರದ ಟೀಸರ್ ಬಿಡುಗಡೆ

ಉಡುಪಿಯ ಬೈಂದೂರು ಮೂಲದ ಯುವ ಪ್ರತಿಭೆ ಶ್ರೀಷ ಇದೀಗ 'ತರಂಗಾಂತರಂಗ' ಚಿತ್ರದ ಮೂಲಕ ನಾಯಕ ನಟನಾಗಿ ಮತ್ತು ನಿರ್ದೇಶಕನಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯವಾಗುತ್ತಿದ್ದಾರೆ. ಗ್ರಾಫಿಕ್ಸ್ ಡಿಸೈನರ್ ಆಗಿ ಮತ್ತು ಇವೆಂಟ್ ಮ್ಯಾನೇಜರ್ ಆಗಿ ಕೆಲಸ ಮಾಡಿದ ಅನುಭವ ಇರುವ ಶ್ರೀಷ, 'ತರಂಗಾಂತರಂಗ' ಎಂಬ ಚಿತ್ರದಲ್ಲಿ ನಾಯಕ ನಟನಾಗಿ ಅಭಿನಯಿಸಿ ಜೊತೆಗೆ ಈ ಚಿತ್ರಕ್ಕೆ ನಿರ್ದೇಶನವನ್ನೂ ಮಾಡಿದ್ದಾರೆ.

ಈಗಾಗಲೇ 'ತರಂಗಾಂತರಂಗ' ಚಿತ್ರದ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣವಾಗಿದ್ದು, ಇದೀಗ ಈ ಚಿತ್ರದ ಮೊದಲ ಟೀಸರ್ ಬಿಡುಗಡೆ ಆಗಿದೆ.

ಬಿಡುಗಡೆ ಸಂದರ್ಭದಲ್ಲಿ 'ತರಂಗಾಂತರಂಗ' ಚಿತ್ರದ ಕಲಾವಿದರು ಹಾಗೂ ತಂತ್ರಜ್ಞರು ಹಾಜರಿದ್ದರು.

ಟೀಸರ್ ಬಿಡುಗಡೆ ಮಾಡಿ ಮಾತನಾಡಿದ ಗಣ್ಯರು 'ಕರಾವಳಿ ಮೂಲದ ಹೊಸ ಪ್ರತಿಭೆಗಳು ಸೇರಿಕೊಂಡು ಈ ಸಿನಿಮಾ ಮಾಡಿದ್ದಾರೆ. ಸಿನಿಮಾದ ಟೀಸರಿನಲ್ಲಿ ಹೊಸತನ ಕಾಣುತ್ತಿದೆ. ಸಿನಿಮಾದ ಕಥೆ ಕೂಡ ಗಮನ ಸೆಳೆಯುವಂತಿದೆ. ಸಿನಿಮಾ ಬಿಡುಗಡೆ ಆಗಿ ಪ್ರೇಕ್ಷಕರ ಗಮನ ಸೆಳೆದು, ಯಶಸ್ವಿಯಾಗಲಿ' ಎಂದರು.

ಇದೇ ವೇಳೆ ಮಾತನಾಡಿದ ಚಿತ್ರದ ನಾಯಕ ನಟ ಮತ್ತು ನಿರ್ದೇಶಕ ಶ್ರೀಷ, 'ಇದೊಂದು ಪುನರ್ಜನ್ಮದ ಕಥೆ ಹೊಂದಿರುವ ಚಿತ್ರ. ನಾವು ದೇವರಿಗೆ ಕಟ್ಟಿಕೊಂಡ ಹರಕೆ ಅಥವಾ ಸೇವೆಗಳನ್ನು ತೀರಿಸಲು ವಿಫಲವಾದರೆ, ಅದರಿಂದ ಏನು ಆಗಬಹುದು ಎಂಬ ಕಥೆಯ ಎಳೆಯನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ಹಿಸ್ಟರಿ, ಸಸ್ಪೆನ್ಸ್, ಥ್ರಿಲ್ಲರ್ ಶೈಲಿಯಲ್ಲಿ ಈ ಸಿನಿಮಾ ಮೂಡಿ ಬಂದಿದೆ. ಈ ಸಿನಿಮಾವನ್ನು ನಿರ್ದೇಶನ ಮಾಡಿ, ತೆರೆ ಮೇಲೆ ಒಂದು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದೇನೆ. ನೋಡುಗರಿಗೆ ಈ ಸಿನಿಮಾ ಹೊಸ ಅನುಭವ ಕೊಡಲಿದೆ' ಎಂದರು.

'ಚಿತ್ರದಲ್ಲಿ ನಟ ಪ್ರಮೋದ್ ಶೆಟ್ಟಿ ಕೂಡ ಒಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಟೀಸರ್ ಬಿಡುಗಡೆ ಮಾತನಾಡಿ

ಯುವ ನಟ, ನಿರ್ದೇಶಕ ಶ್ರೀಷ ಮತ್ತು ಅವರ ತಂಡ ಸೇರಿಕೊಂಡು ಒಳ್ಳೆಯ ಸಿನಿಮಾ ಮಾಡಿದ್ದಾರೆ. ನಾನು ಈ ಚಿತ್ರತಂಡದ ಭಾಗವಾಗಿರುವುದಕ್ಕೆ ಖುಷಿಯಿದೆ. ಯುನಿಫಾರ್ಮ್ ಧರಿಸಿಕೊಂಡು ಈ ಸಿನಿಮಾದ ಪಾತ್ರದಲ್ಲಿ ಅಭಿನಯಿಸಿದ್ದೇನೆ. ಚಿತ್ರತಂಡದ ಜೊತೆ ಕೆಲಸ ಮಾಡಿದ್ದು ಒಂದು ಒಳ್ಳೆಯ ಅನುಭವ' ಎಂದರು.

ಉಳಿದಂತೆ ನಟಿ ಚೆರಿಕಾ ಮೂರ್ತಿ, ಛಾಯಾಗ್ರಾಹಕ ವೆಂಕಟೇಶ್ ಸೇರಿದಂತೆ ಚಿತ್ರದ ಹಲವು ಕಲಾವಿದರು ಮತ್ತು ತಂತ್ರಜ್ಞರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

'ತರಂಗಾಂತರಂಗ' ಚಿತ್ರದಲ್ಲಿ ನಟ ಶ್ರೀಷ ಅವರಿಗೆ ಚೆರಿಕಾ ಮೂರ್ತಿ ಮತ್ತು ಯಶಸ್ವಿನಿ ಸ್ವಾಮಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ಉಳಿದಂತೆ ಹಿರಿಯ ನಟರಾದ ರಮೇಶ್ ಪಂಡಿತ್, ಪ್ರಭಾಕರ ಕುಂದರ್, ಲಿಖಿತಾ ಶೆಟ್ಟಿ, ಮುರಳಿ ಮತ್ತಿತರರು ಇತರ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ..

ಡಿ. 4ರಂದು ತೆರೆಗೆ ಮ್ಯಾರೇಜ್ ಪಾರ್ಟಿ ಚಿತ್ರ!

ಈ ಹಿಂದೆ ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ನಾಯಕನಾಗಿ ನಟಿಸಿದ್ದ ಅಧಿಪತ್ರ ಎಂಬ ಚಿತ್ರವನ್ನು ನಿರ್ದೇಶಿಸಿದ್ದವರು ಚಯನ್ ಶೆಟ್ಟಿ, ಈ ಮೂಲಕ ಮೊದಲ ಪ್ರಯತ್ನದಲ್ಲಿಯೇ ಗಮನ ಸೆಳೆದಿದ್ದ ಚಯನ್ ಶೆಟ್ಟಿಯೀಗ ಮ್ಯಾರೇಜ್ ಪಾರ್ಟಿ ಎಂಬ ಭರ್ಜರಿ ಮನೋರಂಜನಾತ್ಮಕ ಚಿತ್ರದೊಂದಿಗೆ ಪ್ರೇಕ್ಷಕರನ್ನು ಮುಖಾಮುಖಿಯಾಗಲು ತಯಾರಾಗಿದ್ದಾರೆ. ಶ್ರೀ ವಾರಾಹಿ ಫಿಲಂಸ್ ಬ್ಯಾನರಿನಡಿಯಲ್ಲಿ ಸಂತೋಷ್ ಏ ಅವರು ಅದ್ದೂರಿಯಾಗಿ ನಿರ್ಮಾಣ ಮಾಡಿರುವ, ಫಸ್ಟ್ ಲುಕ್ ಪೋಸ್ಟರ್ ಮೂಲಕವೇ ಪ್ರೇಕ್ಷಕರನ್ನು ಸೆಳೆದುಕೊಂಡಿದ್ದ ಮ್ಯಾರೇಜ್ ಪಾರ್ಟಿಯನ್ನು ಇದೇ ಡಿಸೆಂಬರ್ 4ರಂದು ಬಿಡುಗಡೆಗೊಳಿಸಲು ಚಿತ್ರತಂಡ ತೀರ್ಮಾನಿಸಿದೆ. ವಿಶೇಷವೆಂದರೆ, ಈ ಸಿನಿಮಾ ಕನ್ನಡ ಮತ್ತು ಮಲೆಯಾಳಂ ಭಾಷೆಗಳಲ್ಲಿ ತೆರೆಗಾಣಲಿದೆ.

ಮೊದಲ ಚಿತ್ರದಲ್ಲಿ ಗಹನವಾದ ಕಥೆ ಹೇಳಿದ್ದ ಚಯನ್ ಶೆಟ್ಟಿ, ಮ್ಯಾರೇಜ್ ಪಾರ್ಟಿಯ ಮೂಲಕ ಕರಾವಳಿ ತೀರದಲ್ಲಿ ಘಟಿಸುವ ಹಾಸ್ಯಪ್ರಧಾನ ಕಥನವನ್ನು ದೃಶ್ಯ ರೂಪಕ್ಕಿಳಿಸಿದ್ದಾರೆ. ಕರಾವಳಿ ತೀರದ ಲೊಕೇಷನ್ನುಗಳಲ್ಲಿ ವೇಗವಾಗಿ ಚಿತ್ರೀಕರಣ ಮುಗಿಸಿಕೊಂಡಿರುವ ಮ್ಯಾರೇಜ್ ಪಾರ್ಟಿ ಈಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಡಿಸೆಂಬರ್ ನಾಲಕ್ಕರಂದು ಮ್ಯಾರೇಜ್ ಪಾರ್ಟಿಯನ್ನು ತೆರೆಗಾಣಿಸುವ ಸುದ್ದಿ ಹಂಚಿಕೊಂಡಿರೋ ಚಿತ್ರತಂಡ, ದಸರಾ ಹಬ್ಬದ ಶುಭ ಸಂದರ್ಭದಲ್ಲಿ ಮೊದಲ ಹಾಡನ್ನು ಪ್ರೇಕ್ಷಕರಿಗೆ ತಲುಪಿಸಲು ತಯಾರಿ ಆರಂಭಿಸಿದೆ.

ಮ್ಯಾರೇಜ್ ಪಾರ್ಟಿ ಗಟ್ಟಿ ಕಥೆ, ಭರಪೂರ ಮನೋರಂಜನೆಯನ್ನು ಒಳಗೊಂಡಿರುವ ಪಕ್ಕಾ ಫ್ಯಾಮಿಲಿ ಪ್ಯಾಕೇಜ್ ಸಿನಿಮಾ ಎಂಬ ವಿಚಾರವನ್ನು ನಿರ್ದೇಶಕರು ಈಗಾಗಲೇ ಜಾಹೀರು ಮಾಡಿದ್ದಾರೆ. ಶ್ರೀಕಾಂತ್ ಛಾಯಾಗ್ರಹಣ, ರಿತ್ವಿಕ್ ಮುರಳೀಧರ್ ಸಂಗೀತ, ಸು ಫ್ರಂ ಸೋ ಖ್ಯಾತಿಯ ನಿತಿನ್ ಶೆಟ್ಟಿ ಸಂಕಲನ, ಪ್ರಮೋದ್ ಮರವಂತೆ ಮತ್ತು ತ್ರಿಲೋಕ್ ಸಾಹಿತ್ಯ, ಪ್ರಕಾಶ್ ತುಮಿನಾಡು, ದೀಪಕ್ ರೈ, ನವೀನ್ ಡಿ ಪಡೀಲ್, ರಕ್ಷಿತಾ, ನಮಿತಾ ಕಿರಣ್, ರಾಮ್‌ದಾಸ್, ರಘು ಪಾಂಡೇಶ್ವರ, ಪುಷ್ಪರಾಜ್ ಬೋಳಾರ್, ಜ್ಯೋತಿಷ್ ಶೆಟ್ಟಿ, ರಾಧಾಕೃಷ್ಣ, ಪಿಡಿ ಸತೀಶ್, ಭೀಮ್ ರಾವ್ ಮುಂತಾದವರ ತಾರಾಗಣವಿರುವ ಈ ಚಿತ್ರ ಕನ್ನಡ ಮತ್ತು ಮಲೆಯಾಳಂ ಭಾಷೆಗಳಲ್ಲಿ ತೆರೆಗಾಣಲಿದೆಯಂತೆ.

ಚಿತ್ರರಂಗದ ಸುತ್ತ ನಡೆಯೋ ಕಥೆ "18 ಎಕರೆ ಸಿನಿಮಾ ಲಕ್ಕಪ್ಪ"

ಈ ಹಿಂದೆ ಗಾಯತ್ರಿ, ಪ್ರೀತಿಯ ಹುಚ್ಚ ಚಿತ್ರಗಳನ್ನು ನಿರ್ದೇಶಿಸಿದ ವಿ.ಕುಮಾರ್ (ರಾಘವ ವಿನೋದ್ ಕುಮಾರ್) ,ಅವರೀಗ ಸದ್ದಿಲ್ಲದೆ ಮತ್ತೊಂದು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುವ ಪ್ರಯತ್ನದಲ್ಲಿದ್ದಾರೆ.

ಆ ಚಿತ್ರದ ಹೆಸರು '18 ಎಕ್ರೆ ಸಿನಿಮಾ ಲಕ್ಕಪ್ಪ'.

ಚಿತ್ರರಂಗದಲ್ಲಿ ತೆರೆಯ ಹಿಂದೆ ನಡೆಯುವ ಒಂದಷ್ಟು ಸತ್ಯಗಳನ್ನು ಈ ಸಿನಮಾ ಮೂಲಕ ಹೇಳಹೊರಟಿದ್ದಾರೆ. ಸಿನಿಮಾರಂಗಕ್ಕೆ ಹೊಸದಾಗಿ ಬರೋ ನಾಯಕ, ನಾಯಕಿಯರ ಅನುಭವಗಳು, ಪ್ರೊಡಕ್ಷನ್ ಅನುಭವ ಇಲ್ಲದೆ ಚಿತ್ರರಂಗಕ್ಕೆ ಬರುವ ನಿರ್ಮಾಪಕರರನ್ನು ಮ್ಯಾನೇಜರ್ ಗಳು ಹೇಗೆಲ್ಲಾ ನಂಬಿಸಿ ಯಾಮಾರಿಸುತ್ತಾರೆ, ಕಲಾವಿದರಿಗೂ, ಜೀವನಕ್ಕೂ 'ಸಿನಿಮಾ' ಎನ್ನುವುದು ಕನ್ನಡಿ ಇದ್ದಹಾಗೆ ಎಂಬುದನ್ನು ಈ ಚಿತ್ರದ ಮೂಲಕ ಹೇಳೋ ಪ್ರಯತ್ನ ಮಾಡಿದ್ದಾರೆ. ಮಂಡ್ಯ, ಕೀಲಾರ, ಬೆಂಗಳೂರು, ಸಕಲೇಶಪುರ ಹಾಗೂ ಶ್ರವಣಬೆಳಗೊಳದ ಸುತ್ತಮುತ್ತ 45 ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಕುಮಾರ್ ಮೂವೀಸ್ ಅಡಿ ದಯಾನಂದ್ ಕೆ, ಸುಬ್ರಮಣಿ ರಾಮಗೊಂಡನಹಳ್ಳಿ ಅಲ್ಲದೆ ಒಂದಷ್ಟು ಸ್ನೇಹಿತರೇ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ವಿ.ಕುಮಾರ್ ಅವರ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ತಸೀರಂಗರಾಜನ್ ಅವರ ಸಂಗೀತ, ಅರುಣ್ ಅವರ ಕ್ಯಾಮೆರಾ, ದುರ್ಗಾಪ್ರಸಾದ್ ಅವರ ಸಜಕಲನ "18 ಎಕರೆ ಸಿನಿಮಾ ಲಕ್ಕಪ್ಪ"

ಚಿತ್ರಕ್ಕಿದೆ. ಈಗಾಗಲೇ ಚಿತ್ರೀಕರಣ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡು ಬಿಡುಗಡೆಗೆ ಸಿದ್ದವಾಗಿರುವ ಈ ಚಿತ್ರಕ್ಕೆ ಸೆನ್ಸಾರ್ ನಿಂದ ಯು/ಎ ಸರ್ಟಿಫಿಕೇಟ್ ಕೂಡ ದೊರೆತಿದೆ.

ವಿಭಿನ್ನ ಟೈಟಲ್ ಜತೆಗೆ ಗಾಂಧಿನಗರದಲ್ಲಿ ನಡೆಯುತ್ತಿರುವ ಘಟನೆಗಳನ್ನೇ ಇಟ್ಟುಕೊಂಡು ನಿರ್ಮಿಸಲಾದ "18 ಎಕರೆ ಸಿನಿಮಾ ಲಕ್ಕಪ್ಪ" ಚಿತ್ರವನ್ನು ಮುಂದಿನ ತಿಂಗಳು ರಿಲೀಸ್ ಮಾಡೋ ಯೋಜನೆಯಿದೆ ಎಂದು ನಿರ್ದೇಶಕ ವಿ.ಕುಮಾರ್ ಅವರು ಹೇಳಿದ್ದಾರೆ.

ಇನ್ನು "18 ಎಕರೆ ಸಿನಿಮಾ ಲಕ್ಕಪ್ಪ" ಚಿತ್ರದಲ್ಲಿ ಹರಿಚೇತು, ಸಂಜನಾನಾಯ್ಡು ಪ್ರಮುಖ ಪಾತ್ರಗಳಲ್ಲಿದ್ದು, ಉಳಿದಂತೆ ಸಂಗೀತ, ಸುಬ್ರಮಣಿ, ರಾಜಶೇಖರ, ದಯಾನಂದ,ಲಿಂಗೇಶ, ನಯನಕೃಷ್ಣ ಮುಂತಾದವರು ನಟಿಸಿದ್ದಾರೆ. ಅಲ್ಲದೆ ಮೋಹನ್ ಜುನೇಜಾ, ದುಬೈ ರಫೀಕ್ ಅವರ ಕೊನೆಯ ಚಿತ್ರವೂ ಇದಾಗಿದೆ.

ಅಯೋಗ್ಯನಿಗೆ 50ರ ಸಂಭ್ರಮ

ಚಿತ್ರಮಂದಿರ ಗಳಲ್ಲಿ ಅರ್ಧ ಶತಕ ಪೂರೈಸಿದ ವರ್ಷದ ಮೊದಲ ಸಿನಿಮಾ!

ಸತೀಶ್ ನೀನಾಸಂ, ರಚಿತಾ ರಾಮ್ ಜೋಡಿಯ ಅಯೋಗ್ಯ 2 ಚಿತ್ರ 50 ದಿನಗಳನ್ನು ಪೂರೈಸಿದೆ. ಭರ್ಜರಿ ಓಪನಿಂಗ್ ಪಡೆದುಕೊಳ್ಳುವ ಮೂಲಕ ಬಾಕ್ಸಾಫೀಸ್‌ನಲ್ಲಿ ಸದ್ದು ಮಾಡಿದ ಅಯೋಗ್ಯ , ಇದೀಗ ಕರ್ನಾಟಕದ ಸುಮಾರು 25ಕ್ಕೂ ಅಧಿಕ ಚಿತ್ರಮಂದಿರಗಳು ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರದರ್ಶನ ಕಂಡಿದೆ. ಜನರು ಥಿಯೇಟರ್‌ನತ್ತ ಮುಖವೇ ಹಾಕುತ್ತಿಲ್ಲ ಎನ್ನುವ ಹೊತ್ತಿನಲ್ಲಿ ಜನರನ್ನು ಚಿತ್ರಮಂದಿರದೆಡೆಗೆ ಸೆಳೆದ ಈ ಸಿನಿಮಾಕ್ಕೆ ಈಗಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಮೂಲಕ ಈ ವರ್ಷದ ಮೊದಲ 50ನೇ ದಿನ ಪೂರೈಸಿದ ಸಿನಿಮಾ ಎಂಬ ಖುಷಿಯಲ್ಲಿದೆ ಚಿತ್ರತಂಡ. 50 ದಿನಗಳನ್ನು ಪೂರೈಸಿದ ಖುಷಿಯಲ್ಲಿ ಮೈಸೂರಿನ ಲಿಡೋ ಚಿತ್ರಮಂದಿರದಲ್ಲಿ ಪ್ರೇಕ್ಷಕರು ಹಾಗೂ ಅಭಿಮಾನಿಗಳೊಂದಿಗೆ ಸಂಭ್ರಮಿಸಿದ ನಟ ನೀನಾಸಂ ಸತೀಶ್, ನಿರ್ದೇಶಕ ಮಹೇಶ್ ಕುಮಾರ್ ಹಾಗೂ ಚಿತ್ರತಂಡ, ಕೇಕ್ ಕತ್ತರಿಸಿ ಖುಷಿ ಹಂಚಿಕೊಂಡರು. ಸದ್ಯದ ಪರಿಸ್ಥಿತಿಯಲ್ಲಿ ಒಂದೆರಡು ವಾರ ಥಿಯೇಟರ್‌ನಲ್ಲಿ ಸಿನಿಮಾ ಉಳಿಯುವುದೇ ದೊಡ್ಡ ಸಾಹಸದ ಕೆಲಸ. ಹೀಗಿದ್ದೂ ನಮ್ಮ ಸಿನಿಮಾ ಬರೋಬ್ಬರಿ 50 ದಿನಗಳ ಪ್ರದರ್ಶನ ಕಾಣಲು ಸಹಕಾರಿಯಾದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು. ಆದಷ್ಟು ಬೇಗ ಅಯೋಗ್ಯ–3 ಮೂಲಕ ನಿಮ್ಮ ಮುಂದೆ ಬರುವ ಆಲೋಚನೆಯಿದೆ ಎನ್ನುತ್ತಾರೆ ಸತೀಶ್ ನೀನಾಸಂ.

ಎಸ್.ವಿ.ಸಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಎಂ.ಮುನೇಗೌಡ ನಿರ್ಮಿಸಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತವಿದೆ. ರವಿಚಂದ್ರನ್, ರವಿಶಂಕರ್, ಸಾಧುಕೋಕಿಲ, ಶಿವರಾಜ್ ಕೆ.ಆರ್ ಪೇಟೆ, ಅರುಣಾ ಬಾಲರಾಜ್, ಗಿರಿ ಶಿವಣ್ಣ ಮುಂತಾದವರು ಈ ಚಿತ್ರದ ತಾರಾಗಣದಲ್ಲಿದ್ದಾರೆ.

ಡಾ. ವಿಷ್ಣುವರ್ಧನ್ ಅವರ 75 ಹುಟ್ಟುಹಬ್ಬದ ಆಚರಣೆ ನಗರದಲ್ಲಿ ಆಯೋಜಿತವಾಗಿತ್ತು. ಸುಹಾಸಿನಿ, ಜಯಮಾಲಾ, ಭವ್ಯಾ, ಶ್ರುತಿ, ರಮೇಶ್ ಅರವಿಂದ ಸೇರಿದಂತೆ ಕಲಾವಿದರು ನಿರ್ದೇಶಕರು ನಿರ್ಮಾಪಕರು ತಂತ್ರಜ್ಞರು ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಪಾಲ್ಗೊಂಡರು..ಬೆಳಗಿನಿಂದ ರಾತ್ರಿ ತನಕ ಕಾರ್ಯಕ್ರಮಗಳು ನಡೆದವು. ವೀರಕಪುತ್ರ ಶ್ರೀನಿವಾಸ ಅವರು ಇದನ್ನು ಆಯೋಜಿಸಿದ್ದರು.

ಸಂಗೀತ ಬಾರ್ ಅಂಡ್ ರೆಸ್ಟೋರೆಂಡ್ ಮೋಶನ್ ಪೋಸ್ಟರ್ ಬಿಡುಗಡೆ

ಕೋಮಲ್ ಕುಮಾರ್, ಮೇಘನಾ ರಾಜ್, ಅನುಷಾ ರೈ ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿರುವ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದ ಚಿತ್ರೀಕರಣ ಮತ್ತು ಪೋಸ್ಟ್ ಕಾರ್ಯಗಳು ಬಹುತೇಕ ಪೂರ್ಣಗೊಂಡಿದೆ.

ಇದೀಗ ಚಿತ್ರತಂಡ ಪ್ರಚಾರ ಕಾರ್ಯಗಳಿಗೆ ಚಾಲನೆ ನೀಡಿದೆ. 'ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್' ಚಿತ್ರದ ಮೊದಲ ಹಂತದ ಪ್ರಚಾರದ ಭಾಗವಾಗಿಫಸ್ಟ್ ಲುಕ್ ಮೋಶನ್ ಪೋಸ್ಟರ್ ಬಿಡುಗಡೆ ಆಗಿದೆ.

ಈ ಮೋಶನ್ ಪೋಸ್ಟರ್ ನಲ್ಲಿ ನಾಯಕ ನಟ ಕೋಮಲ್ ಆಸ್ಥಾನ ವೊಂದರ ವರ್ಣಚಿತ್ರ ಕಲಾವಿದನಾಗಿ, ನಟಿ ಮೇಘನಾ ರಾಜ್ ರಾಣಿಯಾಗಿ ಕಾಣಿಸಿಕೊಂಡಿದ್ದಾರೆ.

'ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್' ಚಿತ್ರಕ್ಕೆ ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ ಆಕ್ಷನ್–ಕಟ್ ಹೇಳುತ್ತಿದ್ದು, ವಿಕಾಸ್ ಶೆಟ್ಟಿ ಈ ಚಿತ್ರಕ್ಕೆ ಬಂಡವಾಳ ಹೂಡಿ ನಿರ್ಮಾಣ ಮಾಡುತ್ತಿದ್ದಾರೆ. ಬಿಗ್ ಬಜೆಟ್ ನಲ್ಲಿ ಮೂಡಿಬಂದಿರುವ ಈ ಚಿತ್ರ ಎರಡು ಕಾಲಘಟ್ಟದ ಕಥೆಯನ್ನು ಹೊಂದಿದೆ.

ಎರಡು ಹಂತಗಳಲ್ಲಿ 75 ದಿನಗಳ ಕಾಲ ಸಂಗೀತಾ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಕುಂದಾಪುರ, ಶಿವಮೊಗ್ಗ, ತೀರ್ಥಹಳ್ಳಿ ಸೇರಿದಂತೆ ಕರಾವಳಿ ಮಲೆನಾಡು ಭಾಗದಲ್ಲಿ ಈ ಚಿತ್ರದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ.

ಇನ್ನು ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದ ಚಿತ್ರೀಕರಣಕ್ಕಾಗಿ ಕುಂದಾಪುರದ ಅಂಪಾರಿನ ವಾಲ್ಕೂರು ಗ್ರಾಮದಲ್ಲಿ ಏಳು ವಿಭಿನ್ನ ವಿನ್ಯಾಸದ ಬೃಹತ್ ಸೆಟ್‌ಗಳನ್ನು ನಿರ್ಮಿಸಿ, ಅದರಲ್ಲಿ ಚಿತ್ರದ ಬಹುಭಾಗದ ಚಿತ್ರೀಕರಣವನ್ನು ನಡೆಸಲಾಗಿರುವುದು ವಿಶೇಷ. ಕಥೆಯ ಬೇಡಿಕೆಗೆ ತಕ್ಕಂತೆ, ಸುಮಾರು ಎರಡು ಎಕರೆ ವಿಸ್ತೀರ್ಣದ ವಿಶಾಲವಾದ ಜಾಗದಲ್ಲಿ ಏಳು ವೈವಿಧ್ಯಮಯ ಸೆಟ್‌ಗಳನ್ನು ಹಾಕಿ, ಆ ಸೆಟ್‌ನಲ್ಲಿಯೇ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದ ಶೇಕಡಾ 90ರಷ್ಟು ಚಿತ್ರೀಕರಣವನ್ನು ಈ ಸೆಟ್‌ಗಳಲ್ಲಿಯೇ ಚಿತ್ರೀಕರಿಸಲಾಗಿದೆ ಎಂಬುದು ಚಿತ್ರತಂಡದ ಮಾಹಿತಿ. ಅಂದಹಾಗೆ, ಈ ಸಿನಿಮಾದ ಹೆಸರು ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಅಂತಿದ್ದರೂ, ಈ ಒಂದೇ ಸಿನಿಮಾದಲ್ಲಿ ಎರಡು ಟೈಟಲ್‌ಗಳಿವೆ! ಎನ್ನುತ್ತಾರೆ ಚಿತ್ರದ ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ. ಅದಕ್ಕೆ ಕಾರಣ ಈ ಚಿತ್ರದ ಕಥಾಹಂದರ. ಚಿತ್ರದ ಮೊದಲಾರ್ಧ ಬಾರ್‌ನಲ್ಲಿ ಶುರುವಾಗಿ, ಬಾರ್ ಸುತ್ತ ಸಾಗಿದರೆ, ದ್ವಿತೀಯಾರ್ಧ ದೇವರ ತಾಣದಲ್ಲಿ ಶುರುವಾಗಿ ಅಲ್ಲೇ ಮುಗಿಯುತ್ತದೆ. ಹಾಗಾಗಿ ಚಿತ್ರದ ಮೊದಲಾರ್ಧ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಆಗಿದ್ದರೆ, ದ್ವಿತೀಯಾರ್ಧ ದೇವರ ತಾಣ ಅಂತಿದೆ. ಈ ಎರಡೂ ಹೆಸರುಗಳು ಕೂಡ ನಮ್ಮ ಸಿನಿಮಾದ ಟೈಟಲ್ಗಳು! ಆದರೆ ಸೆನ್ಸಾರ್ ನಿಯಮದಂತೆ, ಒಂದು ಸಿನಿಮಾಕ್ಕೆ ಒಂದೇ ಹೆಸರು ಇಡಬೇಕಾಗಿರುವುದರಿಂದ, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಹೆಸರಿನಲ್ಲಿ ಸಿನಿಮಾ ಥಿಯೇಟರಿಗೆ ತರುತ್ತಿದ್ದೇವೆ ಎನ್ನುವುದು ಚಿತ್ರದ ಟೈಟಲ್ ಬಗ್ಗೆ ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ ನೀಡುವ ವಿವರಣೆ.

ಇದೇ ಮೊದಲ ಬಾರಿಗೆ ನಾಯಕ ನಟ ಕೋಮಲ್, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಸಿನಿಮಾದಲ್ಲಿ ಒಂದು ಹಿಂದಿನ ಚಾರಿತ್ರಿಕತೆ ಮತ್ತೊಂದು ಇಂದಿನ ಆಧುನಿಕತೆ ಭಾಗವಾಗಿರುವ ಎರಡು ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಒಂದರಲ್ಲಿ ಆಸ್ಥಾನವೊಂದರ ವರ್ಣಚಿತ್ರ ಕಲಾವಿದನಾಗಿ ಕಾಣಿಸಿಕೊಂಡರೆ, ಮತ್ತೊಂದರಲ್ಲಿ ಸಿನಿಮಾ ನ

ದೇವ ಭಾವಾತೀತ

ಮುದ್ದುರಾಮನ ಅರಿವು ಭಾಗ- 8

ಡಾ. ಪ್ರದೀಪಕುಮಾರ ಹೆಬ್ರಿ
98440 18457

ಯಾರ ದನಿಯಲಿ ಹೇಗೆ ಜೀವ ತುಂಬುವನವನೊ!
ಯಾವ ಹೂವಲಿ ಹೇಗೆ ಚೆಲುವ ತೂರುವನೊ!
ಯಾರ ಮನದಲಿ ಹೇಗೆ ಕಲ್ಪನೆಯ ಮೂಡಿಪನೊ!
ಕುಶಲ ಕೋವಿದ ದೇವ– ಮುದ್ದುರಾಮ

'ಜಗದೀಶನಾಡುವ ಜಗವೆ ನಾಟಕ ರಂಗ ' ಮಾತಿನಿಂದ ಭಗವಂತನ ಹಿರಿಮೆಯನ್ನರಿಯಬಹುದು. ನಮ್ಮ ಬದುಕಿನಲ್ಲಿ ನಡೆಯುವ ಎಲ್ಲದಕ್ಕೂ ಭಗವಂತನೇ ಸೂತ್ರಧಾರ. ಆತನೇ ಸರ್ವಶಕ್ತ ಪರಮಾತ್ಮ, ಆತ ಸರ್ವವ್ಯಾಪಿ. ಎಲ್ಲಿ ನಂಬಿಕೆ ಇದೆಯೋ ಎಲ್ಲಿ ಪ್ರೀತಿ ಇದೆಯೋ ಅಲ್ಲಿ ದೇವರಿರುತ್ತಾನೆ. ಆತನೇ ದಾರಿ ತೋರುವವನು, ಆತನೇ ನಿಗಮ ಗೋಚರನು, ಆತನೇ ಜ್ಯೋತಿಚಂದ್ರಿಕೆ, ಆತನೇ ಜಗದಾಧಾರ. ಆತನೇ ಕುಶಲ ಕೋವಿದ. ಆತನೇ ಶಿವಭಕುತಿ ಸಂಪ್ರೀತ. ತನ್ನನ್ನು ಒಪ್ಪುವವರನ್ನು ಸದಾ ಪ್ರೀತಿಯಿಂದ ಅಪ್ಪಿಕೊಳ್ಳುವನು.

ಭತವಂತನ ವಿಶೇಷತೆಗಳನ್ನು ಹೇಳುವುದಾದರೆ ಆತ ಭಾವಾತೀತ, ಆತ ನಿರ್ಮಲದೀಪ, ಆತನೀ ಜಗಕರ್ತ, ಆತ ಪರಮಾರಾಧ್ಯ, ಆತ ಅಪ್ರತಿಮ, ನಿರ್ಲಿಪ್ತ, ಸೂತ್ರಧಾರ, ನಿತ್ಯಬಲ್ಲಿದ, ನಾವು ದೇವರನ್ನು ಅರಿತರೆ ಕುಲಜರಾಗುತ್ತೇವೆ. ಆಗವನು ನಮ್ಮೊಲವ ಬಾಂಧವನಾಗುತ್ತಾನೆ. ದೀನಜನಬಂಧು, ವರದದಾತ, ತವನಿಧಿ, ಜಗದೊಡೆಯ, ಅವಿನಾಶಿ, ನಾವು ಬೇಡಿದ್ದನ್ನು ಕೊಡುವ ಒಡೆಯನಾಗಿ ರಾರಾಜಿಸಿ ಬದುಕಭಾಗ್ಯವಿಧಾತನೆನಿಸುತ್ತಾನೆ.



ಬದುಕ ಕತ್ತಲೆ ಕಳೆದು ನಿತ್ಯ ಬೆಳಗುವ ದೇವರೇ ಅಭಯಕರ ಘನಮಹಿಮ. ಆತನೇ ಒಣಬೀಜದಿಂದ ಹೆಮ್ಮರವ ತೋರುವವನು. ಆತ ಖಗಮಿಗಕೆ ಮನುಕುಲಕೆ ಉಸಿರಿತ್ತು ಪೊರೆಯುವ ಅಪ್ರತಿಮ. ನಮ್ಮ ಬದುಕ ಸೂತ್ರಧಾರನೇ ತಾನಾಗಿ ತನ್ನಿಚ್ಛೆಯಂತೆ ಆಡುವನು. ತೊಟ್ಟಿಲನು ತೂಗುವನು, ಮಸಣಕೊಯ್ಯುವನು, ತೋರುತ್ತ ಬಹುಚಿತ್ರ ನಗಿಸುವನು, ಅಳಿಸುವನು ಬದುಕ ಸೂತ್ರಧಾರನೆನಿಸುವನು.

ನಾವು ಒಡವೆ ವಸ್ತುಗಳನ್ನು ಒತ್ತೆಯಿಟ್ಟು ದಿನದ ಒಂದಷ್ಟು ಕಷ್ಟಗಳನ್ನು ನೀಗಬಹುದು. ಆದರೆ ಭಕ್ತಿಭಾವವ ಗಿರವಿಯಿಡಲಾರೆವು. ನಾವರಿಯಬೇಕಾದ ನಿಜಸತ್ಯ ಎಂದರೆ ನಮ್ಮ ಆತ್ಮಶಕ್ತಿ ಯ ಮುಂದೆ ಯಾವುದೂ ನಿಲ್ಲಲಸಾಧ್ಯ. ನಿಜಭಕ್ತನೆಂದರೆ ಆಸೆ ಆಮಿಶ ರೋಷ ವಿಷಮರಹಿತ ನಾಗಿರುವವನು. ಭಕ್ತಿಪಥವರಿಯದಿರೆ ದೇವನೆಂದೂ ಒಲಿಯನೆನುವ ಸತ್ಯದರಿವಿದ್ದಾಗ ಮಾತ್ರ ನಿರಾಕಾರ, ಚೈತನ್ಯ ಪರುಷಮಣಿ ದೇವನು



ಭಕುತಿಜಲದಲಿ ಮಿಂದು ನಂಬಿದವರನು ಇಂಬಿಟ್ಟುಕೊಳ್ಳುವನು ಕಮಲದೆದೆಯಲ್ಲಿ!

ನಮ್ಮೊಳಗಿನ ಜೀವ ಬೆಳಗುತ್ತಿರುವ ದೀಪ. ದೇಹವು ಹಣತೆ. ಮನಸ್ಸು ಬತ್ತಿ. ಪ್ರಜ್ಞೆಯು ಜ್ವಾಲೆ, ದೇಹದಲ್ಲಿ ಜೀವಪ್ರಭೆ ನಿತ್ಯ ಪ್ರಕಾಶಿಸುತ್ತಿರಬೇಕಾದರೆ ದೇವನನುಗ್ರಹ ಬೇಕು. ನಮ್ಮ ಸುತ್ತಲಿನ ಲೋಕವನ್ನು ಗಮನಿಸುವಾಗ ಅರಿವಿಗೆ ಬರುವುದು ದೇವರೆಂದರೆ, ನೆಲದ ಮರೆ ಕನಕ ದೇವರೆಂದರೆ ಮುಗಿಲಮರೆ ಸೆಳೆಮಿಂಚು, ದೇವರೆಂದರೆ ತೆನೆಯ ರಸರುಚಿ ದೇವರೆಂದರೆ ನನೆಕಂಪು. ದೇವನೆನಕೆಯಲ್ಲಿ ಗುನುಗೋಣ ನೀ ನಿರಾಕಾರ, ನೀ ಚೈತನ್ಯ ಮೂರುತಿ; ಜಗದೊಡೆಯ ನೀ ಈಶ.

ದೇವರನ್ನು ಗುರುವೆನುವ ಪರಮಭಕ್ತಿಯಲ್ಲಿ ಸ್ವಾತಿ ಮುತ್ತಾಗಲಿಕೆ ನೀನೆರೆವೆ ಕರುಣೆಹನಿ;/ ತೃಷೆ ತಣಿಸಲಿಕೆ ನೀನೆ ತರುವೆ ಜಲಧಾರೆ./ ರಚಿತ ಚಿತ್ರಕೆ ನಿಜದಿ ನೀ ಅನಾಮಿಕ ಕುಂಚ;/ ಎಂದಾರಾಧಿಸುತ್ತ ನಾವು ಅವರಿವರಲ್ಲಿ ಲೌಕಿಕ ಬದುಕ ಲಾಭಕ್ಕಾಗಿ ಬೇಡುವ ಬದಲು ಬೇಡುವೊಡೆ ಬೇಡು ಆ ಪರಮ ಕರುಣಾಕರನ ಎಂದಿರುವ ಕವಿ ' ಬರೀ ಜ್ಞಾನವನ್ನು ಗಳಿಸುವುದು ಜೀವನವಲ್ಲ, ದಿವ್ಯ ಅನುಭವಗಳನ್ನು ಪಡೆದು ಜೀವನವನ್ನು ಪಡೆದುಕೊಳ್ಳಬೇಕು. ಇದು ಸಾಧ್ಯವಾಗುವುದು ದೇವಾನುಗ್ರಹದಿಂದ ಮಾತ್ರ ಎನ್ನುತ್ತ ಮಾನವರಾಗಿ ಹುಟ್ಟಿರುವ ನಮ್ಮ ಬದುಕ ದಾರಿ ಎಂತಿರಬೇಕೆಂಬುದನ್ನು ಅರುಹಿದ್ದಾರೆ.

ಸ್ನೇಹಾ ಆನಂದ್

ಅಪ್ಪನೆಂಬ ಆಸ್ತಿ

ಮನೆಯಲ್ಲಿ ಒಬ್ಬರೇ ಗಳಿಸುವ ವ್ಯಕ್ತಿ ಇದ್ದರೆ ಅವರು ಎಲ್ಲರಿಗಿಂತಲೂ ಕಡಿಮೆ ಖರ್ಚನ್ನು ಮಾಡುತ್ತಾರೆ, ಕಾರಣ ಇಷ್ಟೇ ಅವರಿಗೆ ಮನೆಯ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ, ಕಾಳಜಿ ಹಗಲಿರಳು ಇರುತ್ತದೆ!

ಅಂತಹ ವ್ಯಕ್ತಿ ಒಬ್ಬ ತಂದೆಯಾಗಿದ್ದರೆ ತನ್ನ ಮನೆಯ ಹಿರಿಯರಿಗೆ, ಮಕ್ಕಳಿಗೆ ಹೆಂಡತಿಗೆ ಬಟ್ಟೆ ತೆಗೆಯಲು ಹೋಗುತ್ತಾನೆ, ಆದರೆ ತನಗೆ ಮಾತ್ರ ಬೇಡ ಎನ್ನುವ ಸ್ವಭಾವ! ಯಾರಾದರೂ ತುಂಬಾ ಒತ್ತಾಯ ಮಾಡಿದಾಗ ಮಾತ್ರ ಒಂದು ಜೊತೆ ಬಟ್ಟೆ ತೆಗೆದುಕೊಳ್ಳುತ್ತಾನೆ, ಇಪ್ಪತ್ತು ವರ್ಷಗಳಿಂದ ಒಂದೇ ಗಡಿಯಾರ ಕೈಗೆ ಕಟ್ಟಿರುತ್ತಾನೆ, ತನ್ನ ದಿನ ನಿತ್ಯದ ಅನಿವಾರ್ಯತೆಯನ್ನೂ ಮುಚ್ಚಿಡುವ ಏಕೈಕ ವ್ಯಕ್ತಿ ಎಂದರೆ ತಂದೆ ಮಾತ್ರ!

ಮಕ್ಕಳ ಜೀವನ ರೂಪಿಸುವ ನಿಟ್ಟಿನಲ್ಲಿ ಆತ ತನ್ನ ಮೂಲಭೂತ ಸೌಕರ್ಯಗಳನ್ನು ಕೂಡ ಮರೆತುಬಿಡುತ್ತಾನೆ! ಒಳ ಬಟ್ಟೆಗಳು ಹರಿದಿದ್ದು ನೋಡಿ ಮನೆಯವರೇ ತರಬೇಕು ಎನ್ನುವಷ್ಟು ಆತನ ಮನಸ್ಥಿತಿಯನ್ನು ಬದಲಾಯಿಸಿ ಕೊಳ್ಳುತ್ತಾನೆ...ಒಬ್ಬ ಯುವಕ ಕ್ಷಮತೆ, ತಾಳ್ಮೆ,ತ್ಯಾಗ, ಸ್ಥಿತಪ್ರಜ್ಞತೆ ಈ ಎಲ್ಲಾ ವಿಷಯಗಳನ್ನು ಕಲಿಯುವುದು ತಾನು ತಂದೆಯಾದ ಮೇಲೆಯೇ!

ಇಷ್ಟು ಪ್ರಬುದ್ಧತೆ ಪಡೆಯುವ ತಂದೆಗಾಗಿ ಏನಾದರೂ ಕೊಡಿಸುವ ತೃಪ್ತಿ ಇದೆಯಲ್ಲ ಅದು ಎಲ್ಲಿಯೂ ಸಿಗುವುದಿಲ್ಲ!

ಗಂಡಸರು ಚಿನ್ನ, ಬೆಳ್ಳಿ, ಮೇಕಪ್ ಕಿಟ್ ಹೀಗೆ ಇನ್ನಿತರ ಅಲಂಕಾರಿಕ ಸಾಮಾಗ್ರಿಗಳನ್ನಂತೂ ಬಳಸುವುದೇ ಇಲ್ಲ, ಆದರೂ ಆತ ಹಾಕುವ ಒಂದು ಪ್ಯಾಂಟ್ ಶರ್ಟ್ ತೆಗೆದು ಕೊಳ್ಳಲು ಹತ್ತು ಸಲ ಯೋಚಿಸುತ್ತಾನೆ ಈ ತಿಂಗಳು ಜಾಸ್ತಿ ಖರ್ಚು ಇದೆ ಬೇಡ ಎಂದು ಹೇಳುತ್ತಾನೆ ಹೆಂಡತಿಯ ಹತ್ತಿರ!

ಆದರೆ ಮಗಳು ತನಗಾಗಿ ಅಲಂಕಾರಿಕ ಸಾಮಗ್ರಿಗಳಿಗಾಗಿ ಸಾವಿರ ರೂಪಾಯಿ ಖರ್ಚು ಮಾಡಿದರೂ ನೋಡಿ ಖರ್ಚು ಮಾಡು ಎಂದು ಹೇಳಲು ಕೂಡ ಮನಸ್ಸು ಒಪ್ಪುವುದಿಲ್ಲ ತಂದೆಗೆ!

ತನ್ನ ಪುಟ್ಟ ಮಕ್ಕಳು ಕಾಲು ನೋವು ಎಂದಾಗ ಕೈಯಲ್ಲಿ ಎತ್ತಿಕೊಂಡ ಅಪ್ಪ ಕೈ ಸೋತರೆ ಮಗುವನ್ನು ಹೆಗಲಿಗೆ ವರ್ಗಾಯಿಸುತ್ತಾನೆ ಹೊರತು ಕೆಳಗಿಳಿಸುವುದಿಲ್ಲ! ಅದರಲ್ಲೂ ಹೆಣ್ಣು ಮಗು ಇದ್ದರಂತೂ ಅಪ್ಪನಿಗೆ ಇನ್ನೂ ಪ್ರೀತಿ, ಮಗಳ ಮೃದು ಕಾಲುಗಳನ್ನು ಎಂದಿಗೂ ನೋವಾಗಲು ಬಿಡುವುದಿಲ್ಲ!

ಮಗ ಹುಟ್ಟಿದರೆ ಅಭಿಮಾನ, ಮಗಳು ಹುಟ್ಟಿದರೆ ಅಭಿಮಾನದ ಜೊತೆಗೆ ಮಮಕಾರ ಆತನಲ್ಲಿ ಬಂದೇ ಬಿಡುತ್ತದೆ!

ಹೊರಗೆ ಹೋದಾಗ ತಾನೇನಾದರೂ ರುಚಿಯಾದ್ದನ್ನು ತಿಂದರೆ ಮನೆಯಲ್ಲಿರುವ ಮಕ್ಕಳಿಗೆ ತರದೇ ಬರುವುದಿಲ್ಲ!

ವಯಸ್ಸಿಗೆ ಬಂದ ಹೆಣ್ಣುಮಕ್ಕಳು ತಡರಾತ್ರಿ ಬರುತ್ತಾರೆಂದರೆ ಅಮ್ಮ ಚಡಪಡಿಸಿದಿರೆ ಅಪ್ಪ ಮೌನವಾಗಿ ಸೀದಾ ಬೈಕ್ ಅಥವಾ ಕಾರು ತೆಗೆದುಕೊಂಡು ಆಕೆ ಬರುವುದರೊಳಗೆ ಆ ಸ್ಥಳಕ್ಕೆ ಹೋಗಿ ನಿಲ್ಲುವ ಅಂತಃಕರಣದ ವ್ಯಕ್ತಿ ಅಪ್ಪ! ಆದರೆ ಒಂದೊಂದು ಬಾರಿ ವಿಪರ್ಯಾಸವೆಂದರೆ ತಂದೆ ಮದ್ಯ ವ್ಯಸನಕ್ಕೆ ಅಥವಾ ಇನ್ಯಾವುದೋ ಚಟಕ್ಕೆ ಬಲಿಯಾದರೆ ಕುಟುಂಬ ತುಂಬಾ ನುಲುಗಿ ಹೋಗುತ್ತದೆ, ಆಗ ಆ ಸಮಯದಲ್ಲಿ ತಾಯಿ ಬಂಡೆಗಲ್ಲಿನಂತೆ ನಿಂತು ತನ್ನ ಮಕ್ಕಳನ್ನು ಸಾಕುತ್ತಾಳೆ, ಮಕ್ಕಳ ಜೀವನಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುತ್ತಾಳೆ, ಆದರೂ ಕುಟುಂಬದ ಸದಸ್ಯರು ತುಂಬಾ ಕಷ್ಟ ಪಡುತ್ತಾರೆ ಎನ್ನುವುದು ಖಂಡಿತಾ! ತಾಯಿಯಂತೆಯೇ ತಂದೆಯ ಸ್ಥಾನ ಯಾರೂ ತುಂಬಲಾರರು ಅವರ ಬೆಲೆ ನಮಗೆ ಗೊತ್ತಿರಬೇಕು ಅಷ್ಟೇ! ನಮ್ಮ ಏಳ್ಗೆಯನ್ನು ಕಂಡು ಖುಷಿ ಪಡುವ ವ್ಯಕ್ತಿಯೆಂದರೆ ತಂದೆ, ಏಕೆಂದರೆ ಒಂದು ಮಗುವಿನ ಜೀವನ ರೂಪಿಸಲು ಸತತವಾಗಿ ಇಪ್ಪತ್ತೈದು ವರ್ಷ ನಮಗಾಗಿ ದುಡಿದು ಸಮಯ ಕೊಟ್ಟಿರುತ್ತಾನೆ!

ಅಪ್ಪನ ಕಾಳಜಿ, ವಾತ್ಸಲ್ಯದ ಅಪ್ಪುಗೆ, ಅಪರೂಪದ ಮುತ್ತು ಇವುಗಳನ್ನು ಬದುಕಿನಲ್ಲಿ ಮರೆಯಲು ಸಾಧ್ಯವೇ ಇಲ್ಲ....!!

ಪ್ರೀತಿಯಿಂದ ಅಪ್ಪ **I love you pa** ಎಂದು ಹೇಳಿ ನೋಡಿ, ಆತನ ಕಣ್ಣು ತುಂಬಿ ಬರದಿದ್ದರೆ ಕೇಳಿ!

ನಿಗದಿತ ಸ್ಥಳದಲ್ಲಿಯೇ ಕನ್ನಡ ಭವನ ನಿರ್ಮಾಣಕ್ಕೆ ಆಗ್ರಹ

ಮಂಡ್ಯ : ನಗರದಲ್ಲಿ ಕನ್ನಡ ಭವನ ನಿರ್ಮಾಣ ಕಾಮಗಾರಿಯನ್ನು ನಿಗದಿತ ಸ್ಥಳದಲ್ಲಿಯೇ ಶೀಘ್ರವಾಗಿ ಪ್ರಾರಂಭಿಸಬೇಕೆಂದು ಆಗ್ರಹಿಸಿ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವಸದಸ್ಯರುಗಳು ಹಾಗೂ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಸರ್.ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ಜಮಾವಣೆಗೊಂಡ ಕಸಾಪ ಮತ್ತು ಕನ್ನಡಪರ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮಂಡ್ಯ ನಗರದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ಹಾಗೂ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಮಂಡ್ಯ ನಗರದ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಕನ್ನಡ ಭವನ ನಿರ್ಮಾಣ ಮಾಡಲು ಈಗಾಗಲೇ ಸ್ಥಳ ನಿಗದಿಪಡಿಸಿ, ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಮತ್ತು ಜಿಲ್ಲೆಯ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು

ಹಾಗೂ ಜನಪ್ರತಿನಿಧಿಗಳು, ಕನ್ನಡಾಭಿಮಾನಿಗಳ ಸಮ್ಮುಖದಲ್ಲಿ ಶಂಕುಸ್ಥಾಪನೆಯನ್ನು ನೆರವೇರಿಸಲಾಗಿದೆ.

ನಗರದ ಕೇಂದ್ರ ಭಾಗದಲ್ಲಿರುವ ಈ ಸ್ಥಳದಲ್ಲಿ ಕನ್ನಡ ಭವನ ನಿರ್ಮಾಣವಾದಲ್ಲಿ ಸಾರ್ವಜನಿಕರಿಗೆ, ಸಾಹಿತಿಗಳಿಗೆ, ಕಲಾವಿದರಿಗೆ ಹಾಗೂ ವಿವಿಧ ಸಾಹಿತ್ಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಹೆಚ್ಚಿನ ಅನುಕೂಲವಾಗಲಿದೆ. ಆದ್ದರಿಂದ ನಿಗದಿಪಡಿಸಿರುವ ಸ್ಥಳದಲ್ಲಿಯೇ ಕನ್ನಡ ಭವನ ನಿರ್ಮಾಣವಾಗುವುದು ಅತ್ಯಂತ ಅಗತ್ಯವಾಗಿದೆ. ಅಲ್ಲದೆ ವಾಲಿಬಾಲ್ ಕ್ರೀಡೆಯ ಅಭಿವೃದ್ಧಿಗೂ ಅಗತ್ಯವಾದ ಸ್ಥಳವನ್ನು ಕಾಯ್ದಿರಿಸಿ ಎರಡು ವಾಲಿಬಾಲ್ ಕೋರ್ಟ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಿದೆ. ಹೀಗಾಗಿ ಕನ್ನಡ ಭವನ ನಿರ್ಮಾಣಕ್ಕೆ ನಿಗದಿಪಡಿಸಿರುವ ಸ್ಥಳವನ್ನು ಬದಲಾಯಿಸುವ ಅಗತ್ಯವಿಲ್ಲ.ಆದ್ದರಿಂದ ಮಂಡ್ಯ ಜಿಲ್ಲಾಡಳಿತ ಹಾಗೂ ಸರ್ಕಾರವು ಈ ವಿಷಯವನ್ನು ತುರ್ತಾಗಿ ಪರಿಗಣಿಸಿ, ಈಗಾಗಲೇ ಸಿದ್ಧಪಡಿಸಿರುವ ಯೋಜನೆ ಮತ್ತು ನಕ್ಷೆಯಂತೆ ನಿಗದಿತ ಸ್ಥಳದಲ್ಲಿಯೇ ಕನ್ನಡ ಭವನದ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಬಿ.ಜಯಪ್ರಕಾಶಗೌಡ,ತೈಲೂರು ವೆಂಕಟಕೃಷ್ಣ, ಜಿ.ಟಿ.ವೀರಪ್ಪ, ಎಂ.ವಿ.ಧರಣೇಂದ್ರಯ್ಯ, ಮೀರಾ ಶಿವಲಿಂಗಯ್ಯ,ಧನಂಜಯ ದರಸಗುಪ್ಪೆ, ಎಂ.ಆರ್. ಮಂಜು ಮುತ್ತೆಗೆರೆ, ಚಂದ್ರಲಿಂಗು, ಹರ್ಷ, ಮಹದೇವಯ್ಯ, ಕಾರಸವಾಡಿ ಮಹದೇವು, ರಾಮಾರಾಧ್ಯ, ಅವಿನಾಶ್, ಮೋಹನ್, ವೇಣುಗೋಪಾಲ್,ಸುಂಡಹಳ್ಳಿ ಮಂಜುನಾಥ್,ಚಿಕ್ಕತಿಮ್ಮಯ್ಯ,ಕೆಆರ್ ಪೇಟೆಯ ಪೂರ್ಣಚಂದ್ರ,ಪ್ರಕಾಶ್ ಮೇನಾಗರ,ಡಿ.ಜೆ.ಹೆಗಡೆ, ನಾಗರಾಜು, ಆರ್. ಡಿ. ಮಂಜುನಾಥ್, ಆರ್. ಕೆ. ರಾಮಕೃಷ್ಣ, ಕೆ.ಪಿ.ಯೋಗೇಶ್,ಎಂ.ವಿ.ಕೃಷ್ಣ, ಡಾ. ಸುಮಾರಾಣಿ ಮತ್ತಿತರಿದ್ದರು.

ಚಿಂತನೆಗಳೇ ಬದುಕಿನ ಸಾರ, ಸಾವಿನ ವಿರೋಧಿ

ಆಲೋಚನೆಗಳು ಜೀವದ ಜೇನಿನ ಹನಿ. ಸಕಾರಾತ್ಮಕ ಯೋಚನೆಗಳು ಮೆದುಳಿನ ಡೆಂಡ್ರೈಟ್ ಶಾಖೆಗಳನ್ನು ಬೆಳೆಸಿ, ಬ್ರೈನ್–ಡೆರೈವ್ಡ್ ನ್ಯೂರೋಟ್ರೋಫಿಕ್ ಫ್ಯಾಕ್ಟರ್ ಎಂಬ ಪೋಷಕ ರಸವನ್ನು ಸ್ರವಿಸುತ್ತದೆ. ಇದರಿಂದ ಸಿನಾಪ್ಸ್ ಸಂಪರ್ಕ ಗಟ್ಟಿಯಾಗಿ, ಮರೆವು ದೂರವಾಗುತ್ತದೆ. ಇಸ್ರೇಲ್‌ನ ಅಧ್ಯಯನ ಹೇಳುತ್ತದೆ: ಪ್ರತಿದಿನ ಹೊಸದನ್ನು ಕಲಿಯುವ ವೃದ್ಧರಲ್ಲಿ ಪಾರ್ಕಿನ್ಸನ್ ಲಕ್ಷಣಗಳು 40% ತಗ್ಗುತ್ತವೆ. ಉನ್ನತ ಚಿಂತನೆಯೇ ಕಾಲನಿಗೆ ತೊಡಕು.

ಸದ್ವಿಚಾರ ಸಮೂಹದ ಸೌಭಾಗ್ಯ. ಬರಗಾಲದಲ್ಲಿ ಮಳೆನೀರು ಇಂಗಿಸಲು ಕಿರು ಅಣೆಕಟ್ಟು ಕಟ್ಟುವ ಯೋಚನೆ ಮಾಡಿದ ಗ್ರಾಮದ ಪಟೇಲ, ನೂರಾರು ಹೊಲಗಳಿಗೆ ನೀರಿನ ಆಸರೆ ನೀಡುತ್ತಾನೆ. ಕಸದಿಂದ ಕಲಾಕೃತಿ ಮಾಡುವ ಕಲ್ಪನೆ ಹೊಳೆದ ಶಾಲಾ ಬಾಲಕಿ, ಪೇಟೆಗೆ ಸ್ವಚ್ಛತೆಯ ಸ್ಫೂರ್ತಿ ನೀಡುತ್ತಾಳೆ. ರೋಗಿಗಳಿಗೆ ಔಷಧಿ ತಲುಪಿಸಲು ಡ್ರೋನ್ ಬಳಸುವ ತಂತ್ರಜ್ಞ, ಗುಡ್ಡಗಾಡಿಗೂ ಆರೋಗ್ಯದ ಸೇತುವೆ ಕಟ್ಟುತ್ತಾನೆ. ಒಬ್ಬರ ಸೃಜನಾತ್ಮಕ ಚಿಂತನೆ ಇಡೀ ಜನಪದಕ್ಕೆ ಚಿಲುಮೆ.

ಚಿಂತನೆಯನ್ನು ಚಿಗುರಿಸಲು ಹೀಗೆ ರೂಢಿಸಿಕೊಳ್ಳಿ: ನಸುಕಿನಲ್ಲಿ ಎದ್ದು ಹಕ್ಕಿಗಳ ಕಲರವ ಕೇಳುತ್ತಾ, ಇಂದು ಒಂದು ಹೊಸ ವಿಷಯ ತಿಳಿಯುವೆ ಎಂದು ಪ್ರತಿಜ್ಞೆ ಮಾಡಿ. ದಿನಕ್ಕೊಂದು ಪುಟ ಡೈರಿ ಬರೆದು, ನಿಮ್ಮ ಮನದ ಅಲೆಗಳನ್ನು ಗಮನಿಸಿ. ವಾರಾಂತ್ಯದಲ್ಲಿ ಮಕ್ಕಳೊಂದಿಗೆ ಒಗಟು ಬಿಡಿಸಿ, ಬುದ್ಧಿಗೆ ಹರಿತ ಕೊಡಿ. ಮಾಸಕ್ಕೊಮ್ಮೆ ಬೇರೆ ಭಾಷೆಯ ಒಂದು ಹಾಡನ್ನು ಅರ್ಥಮಾಡಿಕೊಂಡು ಗುನುಗಿ. ಹಬ್ಬದ ದಿನ ಹಳೆಯ ಫೋಟೋ ನೋಡಿ, ನೆನಪಿನ ಜೋಳಿಗೆ ತುಂಬಿಕೊಳ್ಳಿ, ಆಗ ಮನಸ್ಸು ಹಸಿರಾಗಿರುತ್ತದೆ.

ಚಿಂತನೆಯ ಚಿಲುಮೆ ಬತ್ತದವನಿಗೆ ಸಾವಿನ ಬರಡು ಭೂಮಿ ಇಲ್ಲ. ವಿಚಾರದ ವೈಭವ ಇರುವಲ್ಲಿ ಕಾಲನೂ ಕಾಲು ಎಣಿಸುತ್ತಾನೆ. ಆಲೋಚನೆಯೇ ಅಮರತ್ವದ ಅಂಕುರ.

ಅಂಕಣ-36
ಸಾವು ಸಂಕಟಪಡುವ ಸಂಗತಿಗಳು..!

ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿರುದ್ಧ ಅಪಪ್ರಚಾರ ಖಂಡನೀಯ

ಮಂಡ್ಯ: ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ವಿರುದ್ಧ ಕೆಲವರು ಮಾಡುತ್ತಿರುವ ಅಪಪ್ರಚಾರವನ್ನು ಖಂಡಿಸುತ್ತೇವೆ ಎಂದು ರೈತ ಮುಖಂಡ ಶಿವಳ್ಳಿ ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರ ಬಗ್ಗೆ ಮಾಡಲಾಗುತ್ತಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ."ಶಾಸಕರು ವಿದೇಶಕ್ಕೆ ಹೋಗುತ್ತಿರುವುದು ಅವರ ಪತ್ನಿಯ ಆರೋಗ್ಯ ಸಮಸ್ಯೆ ಇರುವುದರಿಂದ ಹೋಗುತ್ತಿರುತ್ತಾರೆ ಆದರೆ ಅವರು ಮೋಜು ಮಸ್ತಿ ಮಾಡಲು ಹೋಗುತ್ತಿಲ್ಲ. ಇದರ ಮಧ್ಯೆ ಅವರ ಗೈರು ಹಾಜರಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಿಂತಿಲ್ಲ"ಎಂದು ಸ್ಪಷ್ಟಪಡಿಸಿದರು.

ಒತ್ತುವರಿ ತೆರವು, ಅಭಿವೃದ್ಧಿ ಕೆಲಸ: ಪಂಚಾಯಿತಿ ಯಲ್ಲಿ 'ಸರ್ಕಾರಿ ಸೇವೆ ಮನೆ ಬಾಗಿಲಿಗೆ' ಕಾರ್ಯಕ್ರಮದಲ್ಲಿ ಸುಮಾರು 30–35 ಎಕರೆ ಒತ್ತುವರಿ ಜಾಗವನ್ನು ತೆರವುಗೊಳಿಸಲಾಗಿದೆ. ದುದ್ದ ಪಂಚಾಯಿತಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಒತ್ತುವರಿ ತ